# ಕರಾವಳಿ ತರಂಗಿಣಿ

ಕಡಲ ಕಿನಾರೆಯಿಂದ ಕೆಂಪು ಕೋಟೆಯವರೆಗೆ..

ಕನ್ನಡ ವಾರಪತ್ರಿಕೆ

**ಸುಭಾಷಿತ:**
ಯಾರಿಗಾದರು ನಿನ್ನಿಂದ ಯಾವುದೇ ಸಹಾಯದ ಅಗತ್ಯವಿದೆಯೋ ಅದನ್ನು ಬಹಳ ಪ್ರೀತಿಯಿಂದ ಮಾಡು. ಆದರೆ ಆ ಸಹಾಯದಿಂದ ನೀನು ಏನನ್ನೂ ಕೂಡ ನಿರೀಕ್ಷಿಸಬೇಡ. ನೀನು ಮಾಡಿದ ಆ ಸಹಾಯ ಯಾವುದೇ ಕಾರಣಕ್ಕೂ ವ್ಯರ್ಥ ಆಗಲಾರದು. ನೀನು ತೊಂದರೆಯಲ್ಲಿದ್ದಾಗ ಅದು ಒಂದಲ್ಲ ಒಂದು ರೂಪದಲ್ಲಿ ಬಂದು ನೆರವಾಗುತ್ತದೆ
**ಭಗವಾನ್ ಶ್ರೀಕೃಷ್ಣ**

PRGI No: KNKAN/25/A2498 www.karavalitharangini.com KARAVALI THARANGINI KANNADA Weekly Dakshina Kannada ದಿನಾಂಕ: 21-11-2025 to 27-11-2025 ಬೆಲೆ:10-00 ಸಂಪುಟ–1 ಸಂಚಿಕೆ–8 ಪುಟಗಳು–6



ಕ್ಷಣ ಕ್ಷಣದ ಸುದ್ದಿಗಳಿಗಾಗಿ
ಕರಾವಳಿ ತರಂಗಿಣಿ
ಪತ್ರಿಕಾ ಬಳಗದಿಂದ
ಅಂತರ್ಜಾಲ ಮಾಧ್ಯಮ
www.karavalitharangini.com
ಕರಾವಳಿ ತರಂಗಿಣಿ
ಮಂಗಳೂರು



800 ವರ್ಷಗಳ ಇತಿಹಾಸ ಹೊಂದಿದ್ದು, ಆಧ್ಯಾತ್ಮಿಕ, ಧಾರ್ಮಿಕ, ಸಾಂಸ್ಕೃತಿಕ, ಸಾಹಿತ್ಯಿಕ ಮತ್ತು ಮಾನವೀಯ ಮೌಲ್ಯಗಳನ್ನು ಸಾರುವ ಶ್ರೀ ಕ್ಷೇತ್ರ ಧರ್ಮಸ್ಥಳದ ಅದ್ದೂರಿಯ ಲಕ್ಷದೀಪೋತ್ಸವವನ್ನು ಲಕ್ಷಾಂತರ ಮಂದಿ ಕಣ್ತುಂಬಿಕೊಂಡರು. ಐದು ದಿನಗಳ ಉತ್ಸವದಲ್ಲಿ ಶ್ರೀ ಮಂಜುನಾಥ ಸ್ವಾಮಿಯ ಉತ್ಸವವು ಪೂರ್ಣ ಪ್ರಮಾಣದಲ್ಲಿ ನಡೆಯಿತು. ಮೊದಲನೆಯದಾಗಿ ಹೊಸಕಟ್ಟೆ ಉತ್ಸವ, ಕೆರೆಕಟ್ಟೆ ಉತ್ಸವ, ಲಲಿತೋದ್ಯಾನ ಉತ್ಸವ, ಕಂಚಿಮಾರುಕಟ್ಟೆ ಉತ್ಸವ ಮತ್ತು ಗೌರಿಮಾರುಕಟ್ಟೆ ಉತ್ಸವಗಳು ನಡೆದರೆ, ಕೊನೆಯದಾಗಿ ಶ್ರೀ ಚಂದ್ರನಾಥ ಸ್ವಾಮಿ ಬಸದಿಯಲ್ಲಿ ಸಮವಸರಣ ಪೂಜೆ ನಡೆಯುತ್ತದೆ. ಉತ್ಸವದ ಅಂಗವಾಗಿ ರಾಜ್ಯಮಟ್ಟದ ವಸ್ತು ಪ್ರದರ್ಶನದ ಜೊತೆಗೆ ಅಮೃತವರ್ಷಿಣಿ ಸಭಾಭವನದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ, ಸರ್ವಧರ್ಮ ಸಮ್ಮೇಳನ, ಸಾಹಿತ್ಯ ಸಮ್ಮೇಳನಗಳು ನಡೆಯಿತು.

## ಸಂಶಯದ ಗುಂಡಿಗಳು ಮುಚ್ಚಿ ಹೋಗಿವೆ –ವಿಶ್ವೇಶ್ವರ ಭಟ್



ಧರ್ಮಸ್ಥಳದ ಬಗ್ಗೆ ಇದ್ದ ಸಂಶಯದ ಗುಂಡಿಗಳೆಲ್ಲಾ ಮುಚ್ಚಿ ಹೋಗಿವೆ. ಮುಖವಾಡಗಳು ಕಳಚಿ ಬಿದ್ದಿವೆ, ಬುರುಡೆಗಳು ಬರಿದಾಗಿವೆ. ಸುಳ್ಳು ಮಕಾಡೆ ಮಲಗಿದೆ. ಸತ್ಯ ಗೆದ್ದಿದೆ. ಯಾರಲ್ಲೂ ಯಾವ ಸಂದೇಹಗಳು ಉಳಿದಿಲ್ಲ, ತನ್ಮೂಲಕ ಶ್ರೀ ಧರ್ಮಸ್ಥಳ ಕ್ಷೇತ್ರ ಮಹಾತ್ಮೆ ಪ್ರಕಟವಾಗಿದೆ ಎಂದು ವಿಶ್ವವಾಣಿ ಪತ್ರಿಕೆಯ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಹೇಳಿದ್ದಾರೆ. ಅವರು ಧರ್ಮಸ್ಥಳ ಲಕ್ಷದೀಪೋತ್ಸವ ಪ್ರಯುಕ್ತ ನಡೆದ ಸಾಹಿತ್ಯ ಸಮ್ಮೇಳನದ 93ನೆ ಅಧಿವೇಶನದ ಅಧ್ಯಕ್ಷತೆ ವಹಿಸಿ ಮಾತನಾಡಿ, **3ನೇ ಪುಟಕ್ಕೆ**

## ಸ್ವಾಭಿಮಾನದ ಬದುಕಿಗೆ ಸಹಕಾರ ಕ್ಷೇತ್ರದ ಕೊಡುಗೆ ಅಪಾರ –ಸ್ಪೀಕರ್



**ಮಂಗಳೂರು:** ಕರಾವಳಿಯಲ್ಲಿ ಮಹಿಳೆಯರ ಸ್ವಾಭಿಮಾನದ ಬದುಕಿಗೆ ಸಹಕಾರ ಕ್ಷೇತ್ರ ಮಹತ್ವದ ಕೊಡುಗೆ ನೀಡಿದೆ. ಸಹಕಾರರಂಗ ದೇಶದ ಗ್ರಾಮೀಣ ಜನರ ಆರ್ಥಿಕ ಸ್ವಾವಲಂಬನೆಗೆ ಒತ್ತು ನೀಡುವ ಮೂಲಕ ಗ್ರಾಮೀಣ ಜನರಿಗೆ ಶಕ್ತಿ ನೀಡಿದೆ. ದೇಶದ ಅಭಿವೃದ್ಧಿಗೆ ಸಹಕಾರರಂಗ ಅಪಾರ ಕೊಡುಗೆ ನೀಡುತ್ತಿದೆ ಎಂದು ಕರ್ನಾಟಕ ರಾಜ್ಯ ವಿಧಾನ ಸಭಾ ಸ್ಪೀಕರ್ ಯು.ಟಿ.ಖಾದರ್ ಶ್ಲಾಘಿಸಿದರು. ಅವರು ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್, ಮಂಗಳೂರು ಇದರ ನೇತೃತ್ವದಲ್ಲಿ ವಿವಿಧ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ "ಆತ್ಮನಿರ್ಭರ ಭಾರತ ಸಾಧನೆಗೆ ವಾಹಕಗಳಾಗಿ ಸಹಕಾರ ಸಂಸ್ಥೆಗಳು" **3ನೇ ಪುಟಕ್ಕೆ**

## ಅಯೋಗ್ಯ ಕಾಂಗ್ರೆಸ್ ಸರಕಾರದಿಂದ ರಾಜ್ಯ ಉದ್ದಾರವಾಗಲ್ಲ –ಬಿವೈವಿ



**ಮಂಗಳೂರು:** ಅಯೋಗ್ಯ ಕಾಂಗ್ರೆಸ್ ಸರಕಾರದಿಂದ ರಾಜ್ಯ ಯಾವತ್ತೂ ಉದ್ದಾರ ಆಗಲು ಸಾಧ್ಯವಿಲ್ಲ. ರಾಜ್ಯದಲ್ಲಿ ಪೊಳ್ಳು ಭರವಸೆ ನೀಡಿ ಅಧಿಕಾರ ಪಡೆದಿರುವ ಜನವಿರೋಧಿ, ರೈತ ವಿರೋಧಿ, ಹಿಂದೂ ವಿರೋಧಿ ಸರಕಾರವನ್ನು ಕಿತ್ತು ಒಗೆಯಬೇಕಾಗಿದೆ. ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ ವೈ, ವಿಜಯೇಂದ್ರ ಹೇಳಿದರು. ಪುತ್ತೂರಿನ ಲಕ್ಷ್ಮೀ ವೆಂಕಟರ್‌ಮಣ ದೇವಳದ ಪ್ರಧಾನಿ ಅಟಲ್ ಬಿಹಾರಿ ವಾಜಪೇಯ ಅವರ ಜನ್ಮ ಶತಾಬ್ಧಿ ಅಂಗವಾಗಿ ಬುಧವಾರ ನಡೆದ ದ.ಕ.ಜಿಲ್ಲಾ ಮಟ್ಟದ 'ಆಟಲ್ ವಿರಾಸತ್' **3ನೇ ಪುಟಕ್ಕೆ**






# ಸಂಪ್ರದಾಯ

## ಗಜನ್ ನೃತ್ಯ





ಚೈತ್ರ ಮಾಸದ ಕೊನೆಯ ದಿನದಂದು ಆಚರಿಸಲಾಗುವ ಗಜನ್ ನೃತ್ಯವು ತ್ರಿಪುರಾದ ಗ್ರಾಮೀಣ ಪ್ರದೇಶಗಳಲ್ಲಿ ಜನಪ್ರಿಯವಾಗಿದೆ. ಈ ನೃತ್ಯದಲ್ಲಿ ಜನರು ಶಿವ ಮತ್ತು ಗೌರಿ ದೇವತೆಗಳ ವೇಷವನ್ನು ಧರಿಸುತ್ತಾರೆ. ನರ್ತಕರು ಮನೆ ಮನೆಗೆ ತೆರಳಿ ನೃತ್ಯ ಮಾಡಿ ಅಕ್ಕಿ ಮತ್ತು ಹಣವನ್ನು ಸಂಗ್ರಹಿಸುತ್ತಾರೆ. ತ್ರಿಪುರಾದಲ್ಲಿ ಬಂಗಾಳಿ ಸಮುದಾಯದವರು ಗಜನ್ ಹಬ್ಬವನ್ನು ಆಚರಿಸುತ್ತಾರೆ. ಹೊಸ ವರ್ಷದ ಸಂತೋಷ ಮತ್ತು ಸಮೃದ್ಧಿಗಾಗಿ ಶಿವನಿಗೆ ಪ್ರಾರ್ಥನೆಗಳನ್ನು ಸಲ್ಲಿಸಲಾಗುತ್ತದೆ. ಶಿವ, ದುರ್ಗಾ ಮಾತೆ, ಕಾಳಿ, ನಂದಿ ಮತ್ತು ಭೃಂಗಿ ವೇಷ ಧರಿಸಿದ ಕಲಾವಿದರು ಡ್ರಮ್‌ಗಳ ಬಡಿತಕ್ಕೆ ನೃತ್ಯ ಮಾಡುತ್ತಾರೆ ಮತ್ತು ಶಿವನನ್ನು ಸ್ತುತಿಸಿ ಹಾಡುಗಳನ್ನು ಹಾಡುತ್ತಾರೆ. ತ್ರಿಪುರಾದಲ್ಲಿ ಇನ್ನೊಂದು ಪ್ರಮುಖವಾದ ಗಲಾಮುಚಮೋ ನೃತ್ಯ ಸುಗ್ಗಿಯ ಋತುವಿನ ಕೊನೆಯಲ್ಲಿ ಆಚರಿಸಲಾಗುತ್ತದೆ. ಉತ್ತಮ ಸುಗ್ಗಿಗಾಗಿ ದೇವರಿಗೆ ಧನ್ಯವಾದ ಅರ್ಪಿಸಲು ಗಾಲಾಮುಚಮೊ ನೃತ್ಯವನ್ನು ನಡೆಸಲಾಗುತ್ತದೆ. ಈ ನೃತ್ಯದ ಸಮಯದಲ್ಲಿ ನೃತ್ಯಗಾರರು ಸಾಂಪ್ರದಾಯಿಕ ವೇಷಭೂಷಣಗಳನ್ನು ಧರಿಸುತ್ತಾರೆ ಮತ್ತು ತಮ್ಮ ಸಂಗೀತ ವಾದ್ಯಗಳನ್ನು ನುಡಿಸುತ್ತಾರೆ. ಈ ನೃತ್ಯವು ತ್ರಿಪುರಾ ಜನ ಸಮುದಾಯದಲ್ಲಿ ವಿಶೇಷ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ನೃತ್ಯದ ಮೂಲಕ ಸಮುದಾಯವು ಉತ್ತಮ ಫಸಲುಗಾಗಿ ದೇವರಿಗೆ ಧನ್ಯವಾದಗಳನ್ನು ನೀಡುತ್ತದೆ. ಗಲಾಮುಚಮೊ ನೃತ್ಯವನ್ನು ಸಾಂಪ್ರದಾಯಿಕ ವೇಷಭೂಷಣಗಳನ್ನು ಧರಿಸಿದ ನೃತ್ಯಗಾರರು ಪ್ರದರ್ಶಿಸುತ್ತಾರೆ. ನೃತ್ಯದ ಸಮಯದಲ್ಲಿ ನುಡಿಸುವ ಸಂಗೀತ ವಾದ್ಯಗಳು ತ್ರಿಪುರದ ವಿಶಿಷ್ಟವಾಗಿದೆ. ಹಾಗೆ ಇನ್ನೊಂದು ವಿಶಿಷ್ಟ ನೃತ್ಯವಾದ ಚೆರಾವ್ಲಂ ನೃತ್ಯವನ್ನು ತ್ರಿಪುರಾದ ಲುಶೈ ಸಮುದಾಯದ ಹುಡುಗಿಯರು ಪ್ರದರ್ಶಿಸುತ್ತಾರೆ. ಅಕಾಲಿಕ ಮರಣ ಹೊಂದಿದವರ ಗೌರವಾರ್ಥವಾಗಿ ಈ ನೃತ್ಯವನ್ನು ಮಾಡಲಾಗುತ್ತದೆ. ಸಾವಿನ ನಂತರ ಮನುಷ್ಯ ಸ್ವರ್ಗಕ್ಕೆ ಹೋಗುತ್ತಾನೆ ಎಂದು ಅವರು ನಂಬುತ್ತಾರೆ. ಬಿದಿರಿನ ಸದ್ದಿನಿಂದ ಸಾಧಿಸಿದ ಕುಣಿತದ ಲಯದಿಂದ ಗಳಿಸಿದ ಆನಂದ ಮತ್ತು ಧೈರ್ಯ ಮತ್ತು ಆತ್ಮಸ್ಥೈರ್ಯದಿಂದ ಸ್ವರ್ಗಕ್ಕೆ ಹೋಗಲು ಸಾಧ್ಯ ಎಂಬ ನಂಬಿಕೆಯಿದೆ.

# ಸಂಪಾದಕೀಯ

ಕರಾವಳಿ ತರಂಗಿಣಿ

## ತಿಳಿನೀರ ಕೊಳದಂತಿರಲಿ ಮನಸ್ಸು...

– ಲಲಿತಶ್ರೀ ಪ್ರೀತಮ್ ರೈ



ಮನಸ್ಸು ಎಷ್ಟು ತಿಳಿಯಾಗಿರುತ್ತದೋ ಅಷ್ಟು ಮನುಷ್ಯನ ಜೀವನದಲ್ಲಿ ನೆಮ್ಮದಿ ಆವರಿಸಿರುತ್ತದೆ. ಹೌದು ಈ ಮಾತು ಪ್ರತಿಯೊಬ್ಬನ ಜೀವನದಲ್ಲೂ ಒಂದಿಲ್ಲೊಂದು ರೀತಿಯಲ್ಲಿ ಬಡವ ಬಲ್ಲಿದನೆನ್ನುವ ಬೇದವಿಲ್ಲದೆ ಅನ್ವಯಿಸುವಂತಹುದು. ನಾವು ಹುಟ್ಟಿನಿಂದ ಸಾಯುವವರೆಗೆ ಒಂದೊಂದು ರೀತಿಯ ಕನಸು, ಆದರ್ಶಗಳನ್ನು ಹೊತ್ತುಕೊಂಡು ಬದುಕುತ್ತಿರುತ್ತೇವೆ. ಒಂದು ಚಿಕ್ಕ ಮಗುವನ್ನು ಕೇಳಿ ಮುಂದೆ ನೀನೇನಾಗುತ್ತೀಯ ಅಂತ, ಇಂದು ಆ ಮಗು ಕೊಡುವ ಉತ್ತರ ಇನ್ನೊಂದಾರು ತಿಂಗಳಲ್ಲಿ ಬೇರೆಯಾಗಿರುತ್ತದೆ. ಕಾರಣ ಆ ಮಗುವಿಗೆ ಪರಿಚಯವಾಗುವ ಪಾತ್ರಗಳು. ಒಂದು ಮಗುವಿಗೆ ಒಬ್ಬ ಡಾಕ್ಟರ್‌ನ ಬಗ್ಗೆ ಹೇಳಿದರೆ ಆ ಮಗು ಮನಸ್ಸಲ್ಲಿ ಡಾಕ್ಟರ್ ಆಗುವ ಕನಸು ಕಾಣುತ್ತದೆ. ಅದೇ ಮರುದಿನ ಒಬ್ಬ ಪೊಲೀಸ್ ಬಗ್ಗೆ ಹೇಳಿದರೆ ಆ ಮಗುವಿನ ಕನಸು ಪೊಲೀಸ್ ಕಡೆ ವಾಲುತ್ತದೆ. ಹೀಗೆ ಕನಸುಗಳ ಹಿಂದೆ ಬೀಳುವ ಮನುಷ್ಯನ ಜೀವನ ದಾರಿ ಮುಂದೊಂದು ದಿನ ಎಲ್ಲಿಯೋ ಹೋಗಿ ನಿಲ್ಲುತ್ತದೆ. ಇನ್ನು ಬಹಳ ಬುದ್ಧಿವಂತರು ತನ್ನ ಮಕ್ಕಳಿಗೆ ಲಕ್ಷ್ಮಣ ರೇಖೆ ಹಾಕಿ ಬೆಳೆಸಲು ಪ್ರಯತ್ನಿಸುತ್ತಾರೆ. ಕೆಲವು ಸಲ ಅಂತವರ ಮಕ್ಕಳು ಉಂಡಾಡಿಗಳಾಗಿ ಓಡಾಡುವುದನ್ನು ನಾವು ಕಂಡಿದ್ದೇವೆ. ಅದಕ್ಕೆ ಇರಬೇಕು ನಮ್ಮ ಹಿರಿಯರು ಈ ಜಗತ್ತಿನಲ್ಲಿ ಒಂದು ಹುಳ್ಳು ಕಡ್ಡಿ ಅಲ್ಲಾಡಬೇಕಾದರೂ ಆ ದೇವನ ಆಣತಿಯಿರಬೇಕು ಎಂದಿರುವುದು. ನಾನು ಯಾವುದಾದರೂ ಕೆಲಸ ಮಾಡಿ ಸೋಲುತ್ತೇನೆನ್ನುವ ಭಯದಲ್ಲಿ ಮಾತಾಡಿದರೆ ನಮ್ಮಮ್ಮ ಯಾವಾಗಲೂ ಒಂದು ಮಾತು ಹೇಳುತ್ತಿದ್ದರು. “ನೀನು ನಿಯತ್ತಿನಿಂದ ಪ್ರಯತ್ನ ಮಾಡು ಫಲಾಫಲ ಆ ದೇವರಿಗೆ ಬಿಟ್ಟದ್ದು” ಒಂದಿಲ್ಲೊಂದು ಸಮಸ್ಯೆಗಳನ್ನು ತಲೆಮೇಲೆ ಹೊತ್ತುಕೊಂಡಿರುವ ಹಾಗಿರುತ್ತಿದ್ದ ನನಗೆ ಅಮ್ಮನ ಕಿವಿ ಮಾತು “ಯಾವಾಗಲೂ ಮನಸ್ಸನ್ನು ತಿಳಿಯಾಗಿಟ್ಟುಕೊಳ್ಳಬೇಕು” ಅಂತ. ಅಮ್ಮನೇನೋ ದೈವ ಭಕ್ತೆ, ದೇವರ ಮೇಲೆ ಬಾರ ಹಾಕಿ ತಾನು ನೆಮ್ಮದಿಯಾಗಿರುತ್ತಿದ್ದರು. ಆದರೆ ನಾವು? ಕನಸುಗಳ ಮೂಟೆ ಹೊತ್ತು ಓಡುವ ನಮ್ಮ ಮನಸು ತಿಳಿಯಾಗಿರಬೇಕಂತೆ. ಅದು ಹೇಗೇ ಸಾದ್ಯ? ಇದು ಇವತ್ತಿನ ಸಮಾಜದಲ್ಲಿ ಸಾಧ್ಯವೇ ಎನ್ನುವ ಪ್ರಶ್ನೆಗಳು ಉದ್ಭವಿಸುತ್ತದೆ ಆದರೆ ಒಮ್ಮೆ ಬದುಕಿ ನೋಡಬೇಕು. ಹೇಳುವುದರಿಂದ ಕೇಳುವುದರಿಂದ ಇದು ಸಿಗಲು ಸಾಧ್ಯವಿಲ್ಲ. ಕೆಲವೊಂದು ನಮ್ಮ ಅನುಭವಕ್ಕೆ ಬರಬೇಕು. ನೆಮ್ಮದಿಯಿಂದ ಬದುಕಲು ನಾವು ಮೊದಲು ನಮ್ಮಲ್ಲಿಯ ಅಹಂ ಬಿಡಬೇಕು. ನಾನೇ ದೊಡ್ಡವನು, ನನ್ನನ್ನು ಬಿಟ್ಟರೆ ಬೇರೆಯವರಿಲ್ಲ, ನನಗೇ ಎಲ್ಲವೂ ಗೊತ್ತು, ಇನ್ನೊಬ್ಬರಿಂದ ಕಲಿಯುವುದು ಏನಿದೆ? ಇವೆಲ್ಲ ನೆಮ್ಮದಿಯ ಬದುಕಿಗೆ ಬೇಡವಾದದ್ದು. ಇಂತಹ ಮಾನಸಿಕ ಪ್ರವೃತ್ತಿ ಬೆಳೆಯುತ್ತಾ ಹೋದಂತೆ ನಮ್ಮೊಳಗೆ ಒಂದು ತರಹದ ಅಸಮಾಧಾನ ಹೆಚ್ಚುತ್ತಾ ಹೋಗುತ್ತದೆ. ಗರ್ವವು ವಿನಾಕಾರಣ ನಮ್ಮಲ್ಲಿಯ ಮಾನಸಿಕ ಅಸಮತೋಲನವನ್ನು ಹೆಚ್ಚಿಸುತ್ತದೆ. ಆಕಾಶದೆತ್ತರಕ್ಕೆ ಬೆಳೆಯಲು ಇಂತಹ ತೂಕ ಕಡಿಮೆ ಇದ್ದಷ್ಟು ಒಳ್ಳೆಯದು. ಅದಕ್ಕೆ ನೀರಿನ ಹಾಗೆ ತಿಳಿಯಾಗಿರಬೇಕು ಮನಸು. ನಿಂತ ನೀರಿಗೆ ಕಲ್ಲು ಬಿಸಾಕಿದಾಗ ಹೇಗೆ ಮಣ್ಣು ಕಸವೆಲ್ಲಾ ಕದಡಿ ಮಲಿನವಾಗುವುದೋ ಹಾಗೆ ಮನಸು ಕೂಡ. ಇಂದು ಸಮಾಜದಲ್ಲಿ ನಾವು ಹಲವಾರು ಪಾತ್ರಗಳನ್ನು ನಿಬಾಯಿಸಬೇಕಾಗುತ್ತದೆ. ತಂದೆ, ತಾಯಿ, ಗಂಡ, ಹೆಂಡತಿ, ಅಪ್ಪ, ಅಮ್ಮ, ಅಣ್ಣ, ತಮ್ಮ, ಅಕ್ಕ, ತಂಗಿ ಹೀಗೆ ಯಾವುದೋ ಒಂದು ಪಾತ್ರವಿರುತ್ತದೆ ಹೀಗೆ ಕ್ಷಣಕ್ಕೊಮ್ಮೆ ಬದಲಾಗುತ್ತದೆ. ಎಲ್ಲಾ ಕಡೆ ನನಗೆ ಬೇಕಾದ ಹಾಗೆ ಇರಲು ಸಾದ್ಯವಿಲ್ಲ. ನಾವು ಯಾರಿಗೆ ಬಗ್ಗದೇ ಹೋದರೂ ಕಾಲಕ್ಕೆ ಬಗ್ಗಲೇ ಬೇಕು. ಯಾವುದೇ ಪರಿಸ್ಥಿತಿ ಕಟ್ಟದಿರುವುದಿಲ್ಲ. ಒಳ್ಳೆಯ ಹಾಗು ಕೆಟ್ಟ ಸಮಯ ಅಂತ ಇರುವುದಿಲ್ಲ. ನಾವು ಸಮಯಕ್ಕೆ ಸ್ಪಂದಿಸಿದ ಹಾಗಿರುತ್ತದೆ. ಕೋಪ, ತಾಪವಿಲ್ಲದ ಸಾಂಗತ್ಯದ ಬದುಕನ್ನು ನೀರಿನಿಂದ ಕಲಿಯಬೇಕು. ಚೀನಾದ ತತ್ವಜ್ಞಾನಿಯಾದ ತಾವೋ ತೇ ಚಿಂಗ್ ಹೇಳುತ್ತಾರೆ. ‘ನೀರಿನ ಹಾಗೆ ಬದುಕಬೇಕು’ ಅಂತ. ನೀರು ಹುಟ್ಟುವುದು ಎಲ್ಲೋ ಆಮೇಲೆ ಸೇರುವುದು ಇನ್ನೆಲ್ಲೋ ಆ ನಡುವೆ ಅದೆಷ್ಟು ವಸ್ತುಗಳೊಂದಿಗೆ ಸೇರಿ ಬದುಕುತ್ತದೆ ಅಲ್ಲವೆ? ಹರಿದು ಬರುವಾಗ ಕಲ್ಲುಗಳು, ಮಣ್ಣುಗಳು, ಮುಳ್ಳುಗಳು, ಕೊಳಚೆ, ಹಳ್ಳ, ಕೊಳ್ಳ ಎಲ್ಲವೂ ಬಂದು ಸೇರುತ್ತದೆ. ಒಂದು ಕಡೆ ಝುರಿಯಾಗಿ ಹರಿದರೆ ಇನ್ನೊಂದು ಕಡೆ ಕಾಲುವೆಯಲ್ಲಿ ಸರಸರನೆ ಹೋಗುತ್ತದೆ. ನದಿಯಲ್ಲಿ ಸಿಹಿಯಾಗಿ, ಸಾಗರದಲ್ಲಿ ಉಪ್ಪಾಗಿ ಬದುಕುತ್ತದೆ. ನೀರಿನಿಂದ ನಾವು ಹೊಂದಿಕೊಂಡು ಬಾಳುವುದನ್ನ ಕಲಿಯಬೇಕು. ಅದರ ಹಾಗೆ ಸಾಮರಸ್ಯದಲ್ಲಿ ನಾವು ಬದುಕಬೇಕು. ನಾವು ಎಷ್ಟೇ ನಾನು ನನ್ನದು ಅಂತ ಮೆರೆದರೂ ಕೊನೆಗೊಂದು ದಿನ ನಮಗೇನಾಗಬೇಕೆನ್ನುವುದನ್ನು ಆ ದೇವನು ನಿರ್ದರಿಸಿಯೇ ಈ ಭೂಮಿಗೆ ಕಳುಹಿಸುತ್ತಾನೆ ಎನ್ನುವುದನ್ನು ಮರೆಯಬಾರದು. ಅದಕ್ಕೆ ಉದಾಹರಣೆ ಎಂಬಂತೆ ನಮ್ಮ ಮುಂದೆ ಸಾವಿರಾರು ಕೋಟಿಗಳ ಸರದಾರುಗಳ ಅಂತ್ಯವನ್ನು ನಾವು ನೋಡಿದ್ದೇವೆ. ಹೀಗಿರುವಾಗ ನಾವು ನಮ್ಮ ಮುಂದಿನ ಪೀಳಿಗೆಗೆ ಹೇಳಿಕೊಡಬೇಕಾಗಿರುವುದು ಮನುಷ್ಯತ್ವವನ್ನು ಮಾತ್ರ. ಹಾಗಾಗಿ ನಮ್ಮ ಹಿರಿಯರು ನಮಗಾಗಿ ಜೋಡಿಸಿದ ಅನುಭವದ ಸರಮಾಲೆಯನ್ನು ನಾವು ನಮ್ಮ ಮುಂದಿನ ಪೀಳಿಗೆಗೆ ಪಸರಿಸುತ್ತಾ ಉತ್ತಮ ಸಮಾಜದ ನಿರ್ಮಾಣಕ್ಕೆ ದಾರಿ ದೀಪವಾಗೋಣ....

# ವೈದ್ಯೋನಾರಾಯಣೋ ಹರೀಃ

## ಅತ್ತಿಮರ




ಸಾಧಾರಣ 10–15 ಮೀಟರ್ ಎತ್ತರ ಬೆಳೆಯುವ ಸದಾ ಹಸಿರಾಗಿರುವ ಈ ವೃಕ್ಷದ ಎಲೆಗಳನ್ನು ಕೆಲವು ಕಡೆ ಕುರಿ, ಆಡು, ದನಕರುಗಳಿಗೆ ಮೇವಾಗಿ ತಿನ್ನಿಸುತ್ತಾರೆ. ಎಲೆ, ಕಾಯಿ, ಫಲ, ತೊಗಟೆಯಿಂದ ಹಳದಿ ವರ್ಣದ, ಅಂಟಾದ ಹಾಲು ಬರುವುದು, ಕಾಯಿ ಹಸಿರಾಗಿದ್ದು, ಗುಂಡಾಗಿರುವುದು. ಮೃದು ಮತ್ತು ಪರಿಮಳಯುಕ್ತವಾದ ಇದರ ಹಣ್ಣುಗಳೆಂದರೆ ಪಶುಪಕ್ಷಿಗಳಿಗೆ ಪ್ರಿಯ. ಇದರ ಹೂವುಗಳು ಅತಿ ಚಿಕ್ಕದಾಗಿದ್ದು ಕಾಣಸಿಗುವುದು ಅಪರೂಪ.

ಉಷ್ಣ ಗುಣ ಹೊಂದಿರುವ ಅತ್ತಿ ಹಣ್ಣಿನ ಸೇವನೆ ಜೀರ್ಣಕ್ರಿಯೆ ಹೆಚ್ಚಿಸುತ್ತದೆ.

ಹಣ್ಣನ್ನು ಜೇನುತುಪ್ಪದೊಡನೆ ನಿಯಮಿತವಾಗಿ ಸೇವಿಸಿದರೆ ಮೂತ್ರದಲ್ಲಿ ಅಥವಾ ಮಲದಲ್ಲಿ ರಕ್ತ ಹೋಗುವುದನ್ನು ಗುಣಪಡಿಸುತ್ತದೆ.

ಹಣ್ಣನ್ನು ತಿನ್ನುವುದರಿಂದ ಕಫದ ಬಾಧೆ, ರಕ್ತನಾಳದ ದೋಷ ಉಪಶಮನವಾಗುತ್ತದೆ.

ಚೆನ್ನಾಗಿ ಪಕ್ವವಾದ, ಹುಳುಕಿಲ್ಲದ, ಹಣ್ಣುಗಳನ್ನು ಚೆನ್ನಾಗಿ ಒಣಗಿಸಿ, ನಯವಾದ ವಸ್ತ್ರಗಾಳಿತ ಚೂರ್ಣ ಮಾಡಿ, 1\2 ಟೀ ಚಮಚ ಚೂರ್ಣಕ್ಕೆ ಸ್ವಲ್ಪ ಜೇನು ಬೆರೆಸಿ ದಿವಸಕ್ಕೆ ಎರಡು ವೇಳೆ ಸೇವಿಸುವುದ ರಿಂದ ಬಹುಮೂತ್ರ ಖಾಯಿಲೆ ಹತೋಟಿಗೆ ಬರುತ್ತದೆ.

ಅತ್ತಿ ಎಲೆಗಳ ರಸವನ್ನು ಹಿಂಡಿ, ಗೋದಿ ಹಿಟ್ಟಿನಲ್ಲಿ ಚೆನ್ನಾಗಿ ಕಲೆಸಿ ಗಟ್ಟಿಯಾದ ಬಾವುಗಳಿಗೆ ಲೇಪಿಸಿ, ಬಟ್ಟೆ ವಾಸಿಯಾಗುವುದು. ಕೀವು ಸೋರುತ್ತಿರುವ ಭಾಗಗಳಿಗೆ ಲೇಪಿಸಿದರೆ ಶೀಘ್ರವಾಗಿ ಗುಣವಾಗುವುವು.

ಅತ್ತಿಮರದ ಕಾಂಡದ ಹಾಲನ್ನು ಮಡಕೆ ಚೂರಿನಲ್ಲಿ ಶೇಖರಿಸಿ, ಕೆನ್ನೆ ಬೀಗಿರುವ ಕಡೆ ಲೇಪಿಸುವುದು ಅಥವಾ ಅತ್ತಿ ಮರದ ಬೇರನ್ನು ನೀರಿನಲ್ಲಿ ತೇದು ಸ್ವಲ್ಪ ಹಿಂಗು ಮತ್ತು ಹರಳೆಣ್ಣೆ ಸೇರಿಸಿ ಚೆನ್ನಾಗಿ ಮಿಶ್ರ ಮಾಡಿ ಲೇಪಿಸುವುದರಿಂದ ಗಂಡಮಾಲ ಕಡಿಮೆಯಾಗುತ್ತದೆ.

ಅತ್ತಿ ಮರದ ತೊಗಟೆಯನ್ನು ನೆರಳಲ್ಲಿ ಚೆನ್ನಾಗಿ ಒಣಗಿಸಿ ವಸ್ತ್ರಗಾಳಿತ ಚೂರ್ಣ ಮಾಡಿ, ಎರಡು ಟೀ ಚಮಚ ಪುಡಿಯನ್ನು ಕುದಿಯುವ ನೀರಿಗೆ ಹಾಕಿ, ಆರಿದ ಕಷಾಯವನ್ನು ಎರಡು ಟೀ ಚಮಚದಂತೆ ಬೆಳಿಗ್ಗೆ ಸಾಯಂಕಾಲ ಸೇವಿಸುವುದರಿಂದ ಮದುಮೇಹ ಹತೋಟಿಗೆ ಬರುತ್ತದೆ.

# ಕ್ಷೇತ್ರದರ್ಶನ




ಮಹತೋಬಾರ ಶ್ರೀ ಸುಬ್ರಮಣ್ಯ

ದಕ್ಷಿಣ ಕನ್ನಡ ಜಿಲ್ಲೆಯ, ಸುಳ್ಯ ತಾಲೂಕಿನಲ್ಲಿರುವ ಈ ದೇವಾಲಯವು ಆದಿ ಶಂಕರರ ಕಾಲದಿಂದ ಸ್ಥಾನಿಕಸ್ಮಾರ್ತ ಮೊರೋಜ ಮನೆತನದ ಆಡಳಿತಕ್ಕೆ ಒಳಪಟ್ಟಿದ್ದು, ಹಿಂದೆ ಸ್ಮಾರ್ತ ಬ್ರಾಹ್ಮಣರಿಂದ ಪೂಜಿಸಲ್ಪಡುತ್ತಿದ್ದ ಸುಬ್ರಹ್ಮಣ್ಯ ಈಗ ಮಾಧ್ವ ಬ್ರಾಹ್ಮಣರ ಪೂಜಾಧೀನದಲ್ಲಿದೆ. ನದಿ–ಕಾಡು–ಪರ್ವತಗಳಿಂದ ಆವೃತವಾಗಿ, ಪ್ರಕೃತಿಯ ಮಡಿಲಲ್ಲಿ ವಿರಾಜಮಾನನಾಗಿರುವ ಶ್ರೀಸುಬ್ರಹ್ಮಣ್ಯ ದೇವರು ಇಲ್ಲಿಯ ದೇವಳದ ಪ್ರಧಾನ ದೇವತೆ. ಮುಖ್ಯ ದ್ವಾರವು ಪೂರ್ವಾಭಿಮುಖವಾಗಿದ್ದು, ಭಕ್ತಾದಿಗಳು ಮುಖ್ಯ ಗೋಪುರವಿರುವ ಪಶ್ಚಿಮ ಬಾಗಿಲಿನಿಂದ ಪ್ರವೇಶಿಸಿ ಒಳಸುತ್ತನ್ನು ಪೂರ್ವ ಬಾಗಿಲಿನಿಂದ ಮುಂದುವರಿಯಬೇಕಾಗಿದೆ. ಗರ್ಭಗುಡಿಯ ಮಧ್ಯ ಭಾಗದಲ್ಲಿ ಶ್ರೀ ದೇವರ ಮೂರ್ತಿಯಿದೆ. ಅದರ ಮೇಲಿನ ಹಂತದಲ್ಲಿ ಶ್ರೀ ಸುಬ್ರಹ್ಮಣ್ಯ ಮೂರ್ತಿ ಮತ್ತು ವಾಸುಕಿ ಹಾಗೂ ಕೆಳ ಹಂತದಲ್ಲಿ ಆದಿಶೇಷನ ಮೂರ್ತಿಗಳಿವೆ. ಕುಕ್ಕೆ ಸುಬ್ರಹ್ಮಣ್ಯ ನಾಗಗಳ ವಾಸ ಸ್ಥಾನವಾಗಿದೆ. ಇಲ್ಲಿ ಶ್ರೀ ಸುಬ್ರಹ್ಮಣ್ಯನಿಗೆ ಸಲ್ಲಿಸಿದ ಪೂಜೆಯು ಸರ್ಪರಾಜನಾದ ವಾಸುಕಿಗೆ ಸಲ್ಲುತ್ತದೆ ಎಂಬುದು ನಂಬಿಕೆ. ಪೌರಾಣಿಕ ಹಿನ್ನೆಲೆಯ ಪ್ರಕಾರ ದುಷ್ಟ ರಾಕ್ಷಸರ ದಮನಕ್ಕಾಗಿ ಜನ್ಮವೆತ್ತಿದ ಕುಮಾರಸ್ವಾಮಿಯು ತಾರಕಾದಿ ಅಸುರರನ್ನು ಯುದ್ಧದಲ್ಲಿ ಸಂಹರಿಸಿ, ಸೋದರ ಗಣಪತಿಯ ಜೊತೆ ಕುಮಾರಪರ್ವತಕ್ಕೆ ಬಂದಾಗ ದೇವೇಂದ್ರನು ತನ್ನ ಮಗಳಾದ ದೇವಸೇನೆಯನ್ನು ಕುಮಾರಸ್ವಾಮಿಗೆ ಕುಮಾರಧಾರ ತೀರ್ಥದ ತಟದಲ್ಲಿ ಮಾರ್ಗಶಿರ ಶುದ್ಧ ಷಷ್ಠಿಯ ದಿನ ಪಾಣಿಗ್ರಹಣ ಮಾಡಿದನು. ಅದೇ ವೇಳೆ ಅಲ್ಲಿಯೇ ತಪಸ್ಸನ್ನಾಚರಿಸುತ್ತಿದ್ದ ನಾಗರಾಜನಾದ ವಾಸುಕಿಯ ಪ್ರಾರ್ಥನೆಯನ್ನು ಮನ್ನಿಸಿ ತಾನು ದೇವಸೇನಾ ಸಮೇತನಾಗಿ ಒಂದಂಶದಿಂದ ಅವನಲ್ಲಿ ನಿತ್ಯ ಸನ್ನಿಹಿತನಾಗಿ ಈ ಕ್ಷೇತ್ರದಲ್ಲಿ ನೆಲೆಸುವುದಾಗಿ ವಾಸುಕಿಯನ್ನು ಹರಸುತ್ತಾನೆ. ಪರಶುರಾಮ ಸೃಷ್ಟಿಯ ಸಪ್ತ ಕ್ಷೇತ್ರಗಳಲ್ಲೊಂದಾದ ಕುಕ್ಕೆ ಶ್ರೀ ಸುಬ್ರಹ್ಮಣ್ಯ ಕ್ಷೇತ್ರವು ಪುರಾಣ, ಇತಿಹಾಸ ಕಾಲಗಳಿಂದಲೂ ನಾಗಾರಾಧನೆಗೆ ಪ್ರಸಿದ್ಧಿಯಾಗಿದ್ದು, ವಾಸುಕೀ ಸನ್ನಿಹಿತ ಶ್ರೀ ಸುಬ್ರಹ್ಮಣ್ಯ ದೇವರು ಭಕ್ತಾಭೀಷ್ಟಪ್ರದಾಯಕನಾಗಿ ಈ ಕ್ಷೇತ್ರದ ಅಧಿದೇವತೆಯಾಗಿ ನೆಲೆಸಿರುತ್ತಾನೆ. ಗುಪ್ತಕ್ಷೇತ್ರವೆಂಬುವುದಾಗಿಯೂ ಈ ಕ್ಷೇತ್ರವನ್ನು ಕರೆಯುತ್ತಾರೆ. ಮೃತ್ತಿಕಾ ಪ್ರಸಾದ ಇಲ್ಲಿನ ಶ್ರೇಷ್ಠ ಪ್ರಸಾದವಾಗಿದೆ. ಪವಿತ್ರ ಕುಮಾರಧಾರ ತೀರ್ಥ ಸ್ನಾನದಿಂದ ಕುಷ್ಠ ರೋಗದಂತಹ ಭಯಾನಕ ರೋಗಗಳೂ, ಚರ್ಮ ವ್ಯಾಧಿಗಳೂ ಶಮನವಾಗುವುದೆಂಬುದು ಭಕ್ತರ ಅಪಾರ ನಂಬಿಕೆ. ಸರ್ಪದೋಷದಿಂದ ಬರುವಂತಹ ಸಂತಾನ ಹೀನತೆ, ಚರ್ಮವ್ಯಾಧಿ, ದೃಷ್ಟಿ ಮಾಂದ್ಯ, ಭೂಮಿ ದೋಷವೇ ಮೊದಲಾದ ಜ್ವಲಂತ ಸಮಸ್ಯೆಗಳಿಗೆ ಪರಿಹಾರವಾಗಿ ಸರ್ಪಸಂಸ್ಕಾರ, ನಾಗಪ್ರತಿಷ್ಠೆ, ಆಶ್ಲೇಷಬಲಿ ಇತ್ಯಾದಿ ಪ್ರಮುಖ ಹರಕೆ ಸೇವೆಗಳನ್ನು ಭಕ್ತರು ಇಲ್ಲಿ ನಡೆಸಿಕೃತಾರ್ಥರಾಗುತ್ತಾರೆ. ಜನ್ಮ ಜನ್ಮಾಂತರದ ದುರಿತಗಳ ನಾಶನಾದ ಶ್ರೀ ಸುಬ್ರಹ್ಮಣ್ಯ ದೇವರು ಭಕ್ತಾದಿಗಳ ಶ್ರದ್ಧಾ–ಭಕ್ತಿ ಪೂರ್ವಕ ಸೇವಾ ಕೈಂಕರ್ಯಗಳನ್ನು ಸ್ವೀಕರಿಸಿ ಇಷ್ಟಾರ್ಥಗಳನ್ನು ಕರುಣಿಸಿ ಪೊರೆಯುವ ಕಲಿಯುಗ ಪ್ರತ್ಯಕ್ಷ ದೇವರೆನಿಸಿಕೊಂಡಿದ್ದಾನೆ. ಇಂತಹ ಪವಿತ್ರ ಕ್ಷೇತ್ರಕ್ಕೆ ಬೇಟಿ ಕೊಟ್ಟು ಶ್ರೀಸ್ವಾಮಿಯ ಕೃಪೆಗೆ ಪಾತ್ರರಾಗಲು ಮರೆಯದಿರಿ.

# ಕಾಮಧೇನು

## ಪ್ರಕೃತಿಯೇ ನಮಗೆ ದಾರಿ ದೀಪ

@ ಕೃಷ್ಣಾಮೃತ





ಪ್ರಕೃತಿಯ ಚಂದವನ್ನು ಬಣ್ಣಿಸಲು ಅಸಾಧ್ಯ. ಯಾಕೆಂದರೆ ಈ ಪ್ರಕೃತಿಯಲ್ಲಿ ಅಡಗಿರುವ ಸೌಂದರ್ಯದ ಸೆಳೆತವೇ ಅಸಮಾನ್ಯವಾದುದು. ಅದನ್ನು ಬಣ್ಣಿಸುತ್ತಾ ಹೋದರೆ ಪದಗಳಿಗೆ ನಿಲುಕದೇ ಹೋಗಬಹುದು. ಭಾರತದ ಉತ್ತರಾಖಂಡ ರಾಜ್ಯದಲ್ಲಿ ಪಶ್ಚಿಮ ಹಿಮಾಲಯದ ಉನ್ನತ ಪ್ರದೇಶದಲಿರುವ ಸಮುದ್ರ ಮಟ್ಟದಿಂದ 3352 ರಿಂದ 3658 ಮೀಟರ್ ಎತ್ತರದಲ್ಲಿರುವ ಪುಷ್ಪ ಕಣಿವೆ ರಾಷ್ಟ್ರೀಯ ಉದ್ಯಾನವು ಅದ್ಭುತ ಪ್ರಕೃತಿ ಸೌಂದರ್ಯಕ್ಕೆ ಹೆಸರಾಗಿದ್ದು, ನೂರಾರು ಬಗೆಯ ಅಸಾಮಾನ್ಯ ಹೂವುಗಳ ನೈಸರ್ಗಿಕ ತೋಟವಾಗಿದೆ. ಅಷ್ಟೇ ಅಲ್ಲದೆ ಜೀವ ವೈವಿಧ್ಯದ ನೆಲೆಯಾಗಿರುವ ರಾಷ್ಟ್ರೀಯ ಉದ್ಯಾನವು ಟಾಹ್ರ್, ಹಿಮ ಚಿರತೆ, ಕಸ್ತೂರಿ ಮೃಗ, ಕೆಂಪು ನರಿ, ಕೋತಿ, ಭರಲ್, ಹಿಮಾಲಯದ ಕಪ್ಪು ಕರಡಿ ಮತ್ತು ಕೆಂಪು ಕರಡಿ, ಪಿಕಾಲ್ ಮುಂತಾದ ಪ್ರಾಣಿಗಳಿಗೆ ನೆಲೆಯಾಗಿದೆ. ಅಗಾಧ ಸಂಖ್ಯೆಯ ಚಿಟ್ಟೆಗಳ ಪ್ರಬೇಧಗಳು ಇಲ್ಲಿ ಕಾಣ ಸಿಗುತ್ತದೆ. ಅಲ್ಲದೆ ಹಿಮಾಲಯದ ಗರುಡ, ಗ್ರಿಫಾನ್ ಹದ್ದು, ಹಿಮ ಕೋಳಿ, ಮೊನಾಲ್, ಹಿಮ ಪಾರಿವಾಳ ಮುಂತಾದ ಹಲವಾರು ಪಕ್ಷಿ ಸಮೂಹವೇ ಇಲ್ಲಿ ನೆಲೆಸಿದೆ. ಇಲ್ಲಿನ ಹೂವುಗಳು ಆಲ್ಪೈನ್ ತಳಿಗೆ ಸೇರಿದ್ದು ಮುಖ್ಯವಾಗಿ ಆರ್ಖಿಡ್, ಪ್ರೈಮ್ಯೂಲಾ, ಮೇರಿಗೋಲ್ಡ್, ಡೈಸೀಗಳು ಹೆಚ್ಚಾಗಿವೆ. ಇಲ್ಲಿನ ಪ್ರದೇಶವು ಆಲ್ಪೈನ್ ಬಿರ್ಚ್ ಮತ್ತು ರೋಡೋಡೆಂಡ್ರಾನ್ ಮರಗಳನ್ನು ಹೆಚ್ಚಾಗಿ ಹೊಂದಿರುವ ಕಾಡಿನಿಂದ ಆವೃತವಾಗಿದೆ. ಇದು ಸ್ಥಳೀಯ ಆಲ್ಪೈನ್ ಹೂವುಗಳ ಹುಲ್ಲುಗಾವಲುಗಳು ಮತ್ತು ವಿವಿಧ ಸಸ್ಯವರ್ಗಗಳಿಗೆ ಹೆಸರುವಾಸಿಯಾಗಿದ್ದು, ಕಪ್ಪು ಕರಡಿ, ಹಿಮ ಚಿರತೆ, ಕಸ್ತೂರಿ ಜಿಂಕೆ, ಕಂದು ಕರಡಿ, ಕೆಂಪು ನರಿ ಮತ್ತು ನೀಲಿ ಕುರಿಗಳು ಸೇರಿದಂತೆ ಅಪರೂಪದ ಮತ್ತು ಅಳಿವಿನಂಚಿನಲ್ಲಿರುವ ಪ್ರಾಣಿಗಳಿಗೆ ಈ ಸಮೃದ್ಧ ವೈವಿಧ್ಯಮಯ ಪ್ರದೇಶವಿದೆ. ಉದ್ಯಾನದಲ್ಲಿ ಕಂಡು ಬರುವ ಪಕ್ಷಿಗಳಲ್ಲಿ ಹಿಮಾಲಯನ್ ಮೋನಾಲ್ ಫೆಸೆಂಟ್ ಮತ್ತು ಇತರ ಎತ್ತರದ ಪಕ್ಷಿಗಳು ಸೇರಿವೆ. ನಂದಾದೇವಿ ರಾಷ್ಟ್ರೀಯ ಉದ್ಯಾನದೊಂದಿಗೆ ಗುರುತಿಸಲ್ಪಡುವ ಈ ಉದ್ಯಾನ ಉನ್ನತ ಪರ್ವತ ಪ್ರಾಂತ್ಯವಾಗಿದ್ದರೂ ಸಹ ತೀವ್ರ ಕಡಿದಾಗಿಲ್ಲ. ರಾಷ್ಟ್ರೀಯ ಉದ್ಯಾನದ ವಿಸ್ತೀರ್ಣವು ಸುಮಾರು 87.50 ಚದರ ಕಿ.ಮೀ. ಗಳಷ್ಟು ಈ ಎರಡೂ ಉದ್ಯಾನಗಳು ಒಟ್ಟಾಗಿ ವಿಶ್ವ ಪರಂಪರೆಯ ತಾಣವಾಗಿ ಮಾನ್ಯತೆ ಪಡೆದಿವೆ. ಇಲ್ಲಿ ಇರುವ ಔಷದೀಯ ಗಿಡಮೂಲಿಕೆಗಳ ಪ್ರಕಾರಗಳು ಹಿಮಾಲಯದ ಇತರ ಯಾವುದೇ ಪ್ರದೇಶಗಳಲ್ಲಿಗಿಂತ ಹೆಚ್ಚಾಗಿದೆ. ಕೆಲವು ಗಿಡ ಮೂಲಿಕೆಗಳಂತೂ ಪಕ್ಕದಲ್ಲಿಯೇ ಇರುವ ನಂದಾದೇವಿ ಉದ್ಯಾನವನದಲ್ಲಿಯೂ ಕಾಣ ಸಿಗುವುದಿಲ್ಲ ಎನ್ನುವುದೇ ಅಚ್ಚರಿಯ ವಿಷಯ. 1931ರ ವರೆಗೂ ಹೊರ ಜಗತ್ತಿನಿಂದ ಈ ಕಣಿವೆಯು ದೂರವಾಗಿತ್ತು ಎನ್ನಲಾಗುತ್ತದೆಯಾದರೂ ಹಿಂದೂ ಪುರಾಣಗಳಲ್ಲಿ ಇದರ ಉಲ್ಲೇಖವಿದೆ ಎನ್ನಲಾಗುತ್ತದೆ. ಹಾಗೂ ಋಷಿ ಮುನಿಗಳು ತಪಸ್ಸು ಮಾಡಲು ಈ ಪ್ರದೇಶಕ್ಕೆ ಹೋಗುತ್ತಿದ್ದರು ಎನ್ನುವುದರ ಬಗ್ಗೆ ಕೂಡ ಉಲ್ಲೇಖಗಳಿವೆ. ಇತಿಹಾಸದ ಪ್ರಕಾರ ಪರ್ವತಾ ರೋಹಿ ಫ್ರಾಂಕ್ ಸ್ಮಿತ್ ಎಂಬಾತ ಹಿಮಾಲಯ ಪರ್ವತವನ್ನು ಏರುವಾಗ ದಾರಿ ತಪ್ಪಿ ಈ ಕಣಿವೆಗೆ ಭೇಟಿ ನೀಡುತ್ತಾನೆ. ಇಲ್ಲಿನ ಹೂವುಗಳ ಸೌಂದರ್ಯವನ್ನು ಕಂಡು ಬೆರಗಾದ ಆತ "ವ್ಯಾಲಿ ಆಫ್ ಫ್ಲವರ್ಸ್" ಎಂಬ ಪುಸ್ತಕವನ್ನು ಹೊರ ತರುತ್ತಾನೆ. ಆ ಬಳಿಕ ಇದು ಹೆಚ್ಚು ಪ್ರಸಿದ್ಧಿಗೆ ಬಂತು. ಉದ್ಯಾನವನ್ನು 1982ರಲ್ಲಿ ರಾಷ್ಟ್ರೀಯ ಉದ್ಯಾನವನ್ನಾಗಿ ಘೋಷಿಸಲಾಯಿತು. ಪುಷ್ಪ ಕಣಿವೆ ರಾಷ್ಟ್ರೀಯ ಉದ್ಯಾನ ಪ್ರದೇಶದಲ್ಲಿ ಯಾವುದೇ ಜನವಸತಿ ಇಲ್ಲ. ಅಲ್ಲದೆ ಜಾನುವಾರುಗಳನ್ನು ಇಲ್ಲಿ ಮೇಯಿಸುವುದನ್ನು ನಿಷೇಧಿಸಲಾಗಿದೆ. ಜೂನ್‌ನಿಂದ ಅಕ್ಟೋಬರ್ ತಿಂಗಳವರೆಗೆ ತೆರೆದಿರುವ ಈ ಪ್ರದೇಶವು ಇತರ ಸಮಯದಲ್ಲಿ ಸಂಪೂರ್ಣವಾಗಿ ಹಿಮದಿಂದ ಮುಚ್ಚಿ ಹೋಗಿರುತ್ತದೆ. ಹಿಮಾಲಯದ ಝುಂಸ್ಕಾರ್ ಶ್ರೇಣಿಯಲ್ಲಿರುವ ಪುಷ್ಪ ಕಣಿವೆ ರಾಷ್ಟ್ರೀಯ ಉದ್ಯಾನದ ಅತ್ಯುನ್ನತ ಸ್ಥಾನವೆಂದರೆ 6719 ಮೀ. ಎತ್ತರವಿ ರುವ ಗೌರಿ ಪರ್ಬತ್. ಈ ರಾಷ್ಟ್ರೀಯ ಉದ್ಯಾನವನ್ನು ತಲುಪಲು ಸುಮಾರು 17 ಕಿ.ಮೀ. ಗಳಷ್ಟು ದೂರವನ್ನು ಕಾಲ್ನಡಿಗೆಯಿಂದ ಕ್ರಮಿಸಬೇಕಾಗುತ್ತದೆ. ಇಲ್ಲಿಗೆ ಸಮೀಪದ ದೊಡ್ಡ ಪಟ್ಟಣವೆಂದರೆ ಜೋಷಿಮಠ. ಜೋಷಿಮಠವು ಹರಿದ್ವಾರ ಮತ್ತು ಡೆಹ್ರಾಡೂನ್ ನಗರಗಳೊಂದಿಗೆ ಉತ್ತಮ ರಸ್ತೆ ಸಂಪರ್ಕವನ್ನು ಹೊಂದಿದ್ದು, ಜೋಷಿಮಠದಿಂದ ಬದರಿನಾಥಕ್ಕೆ ತೆರಳುವ ರಸ್ತೆಯಲ್ಲಿ ಗೋವಿಂದ್ ಘಾಟ್ ಎಂಬ ಹಳ್ಳಿಗೆ ಸಾಗಿ ಅಲ್ಲಿಂದ ಮುಂದೆ ಕಾಲುದಾರಿಯನ್ನು ಹಿಡಿದು ಪುಷ್ಪ ಕಣಿವೆ ರಾಷ್ಟ್ರೀಯ ಉದ್ಯಾನಕ್ಕೆ ತೆರಳಬೇಕಾಗುತ್ತದೆ.

# ಕಲ್ಪವೃಕ್ಷ

@ಪ್ರೀತಂ ರೈ ಇ

## ಮೇ. ಸುರೇಂದರ್ ಮೋಹನ್ ಶರ್ಮಾ

ಸೆಪ್ಟೆಂಬರ್ 1965 ರ ಸಮಯದಲ್ಲಿ ಮೇಜರ್ ಸುರೇಂದರ್ ಮೋಹನ್ ಶರ್ಮಾ ಅವರ ಘಟಕ 8 JAK Rif ಅನ್ನು J & K ನಲ್ಲಿನ ಛಂಬ್ ಸೆಕ್ಟರ್‌ನಲ್ಲಿ ನಿಯೋಜಿಸಲಾಯಿತು. ಪಾಕಿಸ್ಥಾನವು ಆಗಸ್ಟ್ 1965ರಲ್ಲಿ 'ಆಪರೇಷನ್ ಜಿಬ್ರಾಲ್ಟರ್' ಅನ್ನು ಪ್ರಾರಂಭಿಸಿತು. ಇದರಲ್ಲಿ ಸಾವಿರಾರು ನುಸುಳುಕೋರರನ್ನು ವಿಧ್ವಂಸಕ ಮತ್ತು ವಿಧ್ವಂಸಕತೆಯನ್ನು ನಡೆಸಲು ಗಡಿಯಾದ್ಯಂತ ಕಳುಹಿಸಲಾಯಿತು. ಆಪ್ ಜಿಬ್ರಾಲ್ಟರ್ ವೈಫಲ್ಯದ ನಂತರ, ಪಾಕಿಸ್ಥಾನವು 01 ಸೆಪ್ಟೆಂಬರ್ 1965 ರಂದು ಚಂಬ್ ಜಿಲ್ಲೆಯ ಮೇಲೆ ಆಕ್ರಮಣ ಮಾಡಿತು. ಭಾರತೀಯ ಪಡೆಗಳಿಂದ ಆಕ್ರಮಣಕಾರಿ ಪ್ರತಿಕ್ರಿಯೆಯನ್ನು ಪ್ರಚೋದಿಸಿತು. 13 ಸೆಪ್ಟೆಂಬರ್ 1965 ರ ಹೊತ್ತಿಗೆ, 8 JAK ರೈಫಲ್ಸ್ ಅನೇಕ ಯಶಸ್ವಿ ಕಾರ್ಯಾಚರಣೆಗಳ ಭಾಗವಾಗಿತ್ತು ಮತ್ತು ಪಾಕಿಸ್ಥಾನದ ಸಿಯಾಲ್‌ಕೋಟ್ ವಲಯದ ಕಲಾರವಂಡಾದಲ್ಲಿ ಸ್ಥಾಪಿಸಲಾಯಿತು. ಮೇಜರ್ ಸುರೇಂದರ್ ಮೋಹನ್ ಶರ್ಮಾ ಅವರು 8 ಜೆಎಕೆ ರೈಫಲ್ ಬೆಟಾಲಿಯನ್‌ನ ಕಂಪನಿಯೊಂದರ ಕಂಪನಿ ಕಮಾಂಡರ್ ಆಗಿ ಕಾರ್ಯನಿರ್ವಹಿಸುತ್ತಿದ್ದರು. 13 ನೇ ಸೆಪ್ಟೆಂಬರ್ 1965 ರ ರಾತ್ರಿ, ಮೇಜ್ ಸುರೇಂದರ್ ಮೋಹನ್ ಶರ್ಮಾ ಅವರ ಕಂಪನಿಯು ಟ್ಯಾಂಕ್‌ಗಳ ತುಕಡಿಯೊಂದಿಗೆ ಪದಾತಿದಳದ ಬೆಟಾಲಿಯನ್ ಮತ್ತು ಪ್ಯಾಟನ್ ಟ್ಯಾಂಕ್‌ಗಳ ಸ್ಕ್ವಾಡ್ರನ್ ಅನ್ನು ಒಳಗೊಂಡ ಶತ್ರು ಪಡೆಗಳಿಂದ ದಾಳಿ ಮಾಡಿತು. ಶತ್ರುಗಳು ಸಂಖ್ಯಾತ್ಮಕವಾಗಿ ಶ್ರೇಷ್ಠರಾಗಿದ್ದರು ಮತ್ತು ಫಿರಂಗಿ ಮತ್ತು ರಕ್ಷಾಕವಚದಿಂದ ಬೆಂಬಲಿತರಾಗಿದ್ದರು. ಭಾರೀ ಶೆಲ್ ದಾಳಿ ಮತ್ತು ಟ್ಯಾಂಕ್ ದಾಳಿಯ ನಂತರ, ಶತ್ರು ಪದಾತಿ ಸೈನ್ಯದ ಬೆಟಾಲಿಯನ್ 8 JAK Rif ಕಂಪನಿಯ ಸ್ಥಾನಗಳ ಮೇಲೆ ದಾಳಿ ಮಾ





ಡಿತು. ಭಾರೀ ವಿರೋಧಾಭಾಸಗಳ ಹೊರತಾಗಿಯೂ, ಮೇಜ್ ಶರ್ಮಾ ತನ್ನ ಜನರನ್ನು ಹೋರಾಟವನ್ನು ಮುಂದುವರಿಸಲು ಪ್ರೇರೇಪಿಸಿದರು. ಅವರು ತೀವ್ರವಾದ ಶತ್ರುಗಳ ಗುಂಡಿನ ದಾಳಿಯಲ್ಲಿಯೂ ಯುದ್ಧವನ್ನು ಒಂದು ಪ್ಲಟೂನ್ ಪ್ರದೇಶದಿಂದ ಇನ್ನೊಂದಕ್ಕೆ ನಿರ್ದೇಶಿಸುತ್ತಿದ್ದರು. ಶತ್ರು ಪಡೆಗೆ ಅಗಾಧವಾದ ಸಂಖ್ಯಾತ್ಮಕ ಬಲ ಮತ್ತು ಶೆಲ್ ದಾಳಿಯ ಶಕ್ತಿ ಇದ್ದರೂ ಮೇಜರ್ ಶರ್ಮಾ ಅವರ ಕಂಪನಿಯು ಅದರ ಮೇಲೆ ಭಾರಿ ಸಾವುನೋವುಗಳನ್ನು ಉಂಟುಮಾಡಿತು. ಪಾಕಿಸ್ಥಾನ ಸೇನೆಯ 6 ಫ್ರಾಂಟಿಯರ್ ಫೋರ್ಸ್ ಆರ್ಟಿಲರಿ ಮತ್ತು ಆರ್ಮರ್ ಸ್ಕ್ವಾಡ್ರನ್ ಜೊತೆಗೆ ಮೇಜರ್ ಶರ್ಮಾ ಅವರ ಸ್ಥಾನಗಳ ಮೇಲೆ ದಾಳಿಯನ್ನು ನಡೆಸಿತು. ಮೇಜರ್ ಶರ್ಮಾ ಮತ್ತು ಅವನ ಜನರು ಸಂಪನ್ಮೂಲಗಳ ಕೊರತೆಯ ಹೊರತಾಗಿಯೂ ಶತ್ರುಗಳಿಗೆ ತಕ್ಕ ಉತ್ತರವನ್ನು ನೀಡಿದರು. ಆದಾಗ್ಯೂ ಭೀಕರ ಯುದ್ಧದ ಸಮಯದಲ್ಲಿ ಮೇಜರ್ ಶರ್ಮಾ ಗಂಭೀರವಾಗಿ ಗಾಯಗೊಂಡು ಹುತಾತ್ಮರಾದರು. ಮೇಜರ್ ಶರ್ಮಾ ಒಬ್ಬ ಧೀರ ಸೈನಿಕ ಮತ್ತು ತನ್ನ ಸೈನಿಕರನ್ನು ಮುಂದೆ ನಿಂತು ಮುನ್ನಡೆಸುವ ಉತ್ತಮ ಅಧಿಕಾರಿ. ಮೇಜರ್ ಸುರೇಂದರ್ ಮೋಹನ್ ಶರ್ಮಾ ಅವರು ಕರ್ತವ್ಯದ ಕರೆಯನ್ನು ಮೀರಿ ಶತ್ರುಗಳ ಎದುರು ಅಸಾಧಾರಣ ಧೈರ್ಯವನ್ನು ತೋರಿಸಿ, ದೇಶ ಸೇವೆಯಲ್ಲಿ ತಮ್ಮ ಪ್ರಾಣವನ್ನು ಅರ್ಪಿಸಿದರು. ಅವರ ಅಸಾಧಾರಣ ಶೌರ್ಯ, ಹೋರಾಟದ ಮನೋಭಾವ ಮತ್ತು ಅತ್ಯುನ್ನತ ತ್ಯಾಗಕ್ಕಾಗಿ ಅವರಿಗೆ "ವೀರ ಚಕ್ರ" ಶೌರ್ಯ ಪ್ರಶಸ್ತಿಯನ್ನು ನೀಡಲಾಯಿತು. ಮೇಜರ್ ಸುರೇಂದರ್ ಮೋಹನ್ ಶರ್ಮಾ ಅವರು 28 ಆಗಸ್ಟ್ 1936 ರಂದು ಪಾಕಿಸ್ಥಾನದ ಮುರ್ರೀಯಲ್ಲಿ ಜನಿಸಿದರಾದರೂ, ಕುಟುಂಬವು ನಂತರ ಚಂಡೀಗಢದಲ್ಲಿ ನೆಲೆಸಿತು. ಅವರು 21 ನೇ ವಯಸ್ಸಿನಲ್ಲಿ 15 ಡಿಸೆಂಬರ್ 1957 ರಂದು ಸೇನೆಗೆ ಸೇರಿದರು. ಅವರನ್ನು ಜಮ್ಮು ಮತ್ತು ಕಾಶ್ಮೀರ ರೈಫಲ್ಸ್‌ನ 3 JAK ರೈಫಲ್ಸ್ ಬೆಟಾಲಿಯನ್‌ಗೆ ನಿಯೋಜಿಸಲಾಯಿತು, ಅವರು ಬೆಟಾಲಿಯನ್‌ಗೆ ಸೇರಿದ ಮೊದಲ ಅಧಿಕಾರಿಗಳಲ್ಲಿ ಒಬ್ಬರು. ಇವರನ್ನು ಕರಾವಳಿ ತರಂಗಿಣಿ ಹೆಮ್ಮೆಯಿಂದ ನೆನಪಿಸಿಕೊಳ್ಳುತ್ತಿದೆ.

# ಪಾರಿಜಾತ

ಕರಾವಳಿ ತರಂಗಿಣಿ

ಹೆಣ್ಣು ಒಂದು ಮನೆಯಲ್ಲಿ ಹುಟ್ಟಿ ಇನ್ನೊಂದು ಮನೆ ಬೆಳಗುವವಳು. ಹೆಣ್ಣೆಂದರೆ ಒಂದು ಮನೆಯ ಕಣ್ಣು. ಒಂದು ಕಾಲದಲ್ಲಿ ಹೆಣ್ಣನ್ನು ಅಬಲೆಯಾಗಿ ಬಿಂಬಿಸಿದ್ದರೂ ಕೂಡ ತನ್ನ ಮನೆ ಮಂದಿಗೆ ಏನಾದರೂ ಅಪಾಯ ಆಗುತ್ತದೆ ಎಂದರೆ ತಾನು ಎಂತಹ ಸಾಹಸವನ್ನು ಬೇಕಾದರೂ ಮಾಡಲು ಹೆಣ್ಣು ಸಿದ್ಧವಿರುತ್ತಾಳೆ. ಹಾಗೆಯೆ ನಮ್ಮ ನೆಲ, ಜಲದ ವಿಷಯ ಬಂದಾಗಲೂ ಕೂಡ ಹೆಣ್ಣು ವೀರಾವೇಶದಿಂದ ಹೋರಾಡಿರುವುದರ ಉದಾಹರಣೆಯಾಗಿ ಜಾನ್ಸಿ ರಾಣಿ ಲಕ್ಷ್ಮಿ ಭಾಯಿ, ಕಿತ್ತೂರು ರಾಣಿ ಚೆನ್ನಮ್ಮ, ಉಳ್ಳಾಲದ ರಾಣಿ ಅಬ್ಬಕ್ಕ, ಚಿತ್ರದುರ್ಗದ ಒನಕೆ ಓಬವ್ವ ಹೀಗೆ ಹಲವಾರು ವೀರ ಮಾತೆಯರ ಹೆಸರನ್ನು ನಾವು ಕೇಳಿದ್ದೇವೆ. ಅವರು ನಮ್ಮಂತಹ ಎಷ್ಟೋ ಹೆಣ್ಣು ಮಕ್ಕಳಿಗೆ ಆದರ್ಶವೂ ಕೂಡ. ಅಂತಹ ಹೆಣ್ಣು ಮಕ್ಕಳ ಆದರ್ಶಗಳೊಂದಿಗೆ ಹೆಣ್ಣುಮಕ್ಕಳು ಸೇನೆಗೆ ಸೇರಿ ಭಾರತ ಮಾತೆಯ ವೀರ ಪುತ್ರಿಯರಾಗಿ ಮೆರೆದಿದ್ದಾರೆ ಹಾಗೇ ಮೆರೆಯುತ್ತಿದ್ದಾರೆ. ಅಂತಹ ಮಹಿಳೆಯರಲ್ಲಿ “ಕರಾವಳಿ ತರಂಗಿಣಿ”ಯ ಇಂದಿನ ಆಯ್ಕೆ “ಗುಂಜನ್ ಸಕ್ಸೇನಾ”. ಗುಂಜನ್ ಸಕ್ಸೇನಾ ಮೂಲತ: ಶ್ರೀನಗರದವರು. ಸಕ್ಸೇನಾ ಅವರ ತಂದೆ ಅನುಪ್ ಸಕ್ಸೇನಾ ಭಾರತೀಯ ಸೇನೆಯಲ್ಲಿ ಲೆಫ್ಟಿನೆಂಟ್ ಕರ್ನಲ್ ಆಗಿದ್ದರು. ಹಾಗೆಯೆ ಇವರ ಸಹೋದರ ಅಂಶುಮಾನ್ ಸಕ್ಸೇನಾ ಕೂಡ ಲೆಫ್ಟಿನೆಂಟ್ ಕರ್ನಲ್. ದೇಶದ ಸೇವೆಯನ್ನೆ ಮುಡಿಪಾಗಿಟ್ಟಿದ್ದ ಕುಟುಂಬದಲ್ಲಿ ಹುಟ್ಟಿರುವ ಗುಂಜನ್ ತನ್ನ 24ನೇ ವಯಸ್ಸಿನಲ್ಲಿ ಕಾರ್ಗಿಲ್ ಯುದ್ಧದ ಸಮಯದಲ್ಲಿ ಫ್ಲೈಯಿಂಗ್ ಆಫೀಸರ್ ಸಕ್ಸೇನಾ ಆಪರೇಷನ್






ವಿಜಯ್‌ನ ಭಾಗವಾಗಿ, ಗಾಯಾಳುಗಳನ್ನು ಸ್ಥಳಾಂತರಿಸುವುದರ ಜೊತೆಗೆ, ದ್ರಾಸ್ ಮತ್ತು ಬಟಾಲಿಕ್‌ನ ಮುಂದಿನ ಪ್ರದೇಶಗಳಲ್ಲಿ ಸೈನ್ಯಕ್ಕೆ ಸರಬರಾಜುಗಳನ್ನು ಸಾಗಿಸಲು ಸಹಾಯ ಮಾಡಿದರು. ಶತ್ರುಗಳ ಸ್ಥಾನಗಳನ್ನು ಮ್ಯಾಪಿಂಗ್ ಮಾಡುವಂತಹ ಕಣ್ಗಾವಲು ಪಾತ್ರಗಳನ್ನು ಸಹ ಆಕೆಗೆ ವಹಿಸಲಾಯಿತು. ಈ ಸಂದರ್ಭದಲ್ಲಿ ಹತ್ತು ಪೈಲಟ್‌ಗಳಲ್ಲಿ ಒಬ್ಬರಾಗಿ ರುವುದರ ಜೊತೆಗೆ ಶ್ರೀನಗರ ಮೂಲದ ಏಕೈಕ ಮಹಿಳಾ ಪೈಲಟ್ ಆಗಿದ್ದರು, ಯುದ್ಧದ ಸಮಯದಲ್ಲಿ ನೂರಾರು ಬಾರಿ ವಿಮಾನಗಳನ್ನು ಹಾರಿಸಿದರು, 900 ಕ್ಕೂ ಹೆಚ್ಚು ಜನರನ್ನು ಸ್ಥಳಾಂತರಿಸುವಲ್ಲಿ ಕೆಲಸ ಮಾಡಿದ್ದರು. ಸಕ್ಸೇನಾ ಭಾರತೀಯ ಸಶಸ್ತ್ರ ಪಡೆಗಳಲ್ಲಿನ ಏಕೈಕ ಮಹಿಳೆ ಕಾರ್ಗಿಲ್ ಯುದ್ಧದಲ್ಲಿ ಯುದ್ಧ ವಲಯಗಳಲ್ಲಿ ಸಕ್ರೀಯ ರಾಗಿದ್ದವರು. 2004 ರಲ್ಲಿ, ಹೆಲಿಕಾಪ್ಟರ್ ಪೈಲಟ್ ಆಗಿ ಆಕೆಯ ವೃತ್ತಿಜೀವನದಲ್ಲಿ ಏಳು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು. ಸಕ್ಸೇನಾ ಅವರ ಪತಿ ಗೌತಮ್ ನಾರಾಯಣ್, ವಿಂಗ್ ಕಮಾಂಡರ್ ಹಾಗೇ ಭಾರತೀಯ ವಾಯು ಪಡೆಯ ಪೈಲಟ್ ಆಗಿದ್ದಾರೆ. ಅವರು ನ್ಯಾಷನಲ್ ಡಿಫೆನ್ಸ್ ಅಕಾಡೆಮಿಯಲ್ಲಿ ಬೋಧಕರಾಗಿ ಸೇವೆ ಸಲ್ಲಿಸಿದರು, ಇದು ವಿಶ್ವದ ಮೊದಲ ತ್ರಿ–ಸೇವಾ ಅಕಾಡೆಮಿಯಾಗಿದೆ. ದಂಪತಿಗೆ ಪ್ರಜ್ಞಾ ಎಂಬ ಮಗಳಿದ್ದಾಳೆ, 1996ರಲ್ಲಿ ಭಾರತೀಯ ವಾಯುಪಡೆಗೆ ಪೈಲಟ್‌ಗಳಾಗಿ ಸೇರಿದ ಆರು ಮಹಿಳೆಯರಲ್ಲಿ ಸಕ್ಸೇನಾ ಒಬ್ಬರು. ಇಂತಹ ವೀರ ವನಿತೆ ಭಾರತಾಂಬೆಗೆ ಇನ್ನಷ್ಟು ಸೇವೆ ಗೈಯುವಂತಾಗಲಿ ಎನ್ನುವುದೇ “ಕರಾವಳಿ ತರಂಗಿಣಿ” ಹಾರೈಕೆ.

# ಸುದ್ದಿ ತುಣುಕು

ಮೈಸೂರು ಜಿಲ್ಲೆಯ ನಂಜನಗೂಡು ಪಟ್ಟಣದಲ್ಲಿ ಮನೆ ಮುಂದೆ ನಿಲ್ಲಿಸಿದ್ದ ಎರಡು ಕಾರುಗಳಿಗೆ ಬೆಂಕಿ ಹಚ್ಚಿರುವ ಘಟನೆ ನಡೆದಿದೆ.

ಮಂದಾರ್ತಿ ಮೇಳದ ಕಲಾವಿದರಾದ ಈಶ್ವರ ಗೌಡ ಅವರು ಮಹಿಷಾಸುರ ಪಾತ್ರದ ವೇಷ ಕಳಚುತ್ತಿದ್ದಾಗ ಹೃದಯಾಘಾತದಿಂದ ಸಾವನ್ನಪ್ಪಿದ್ದಾರೆ.

ಧರ್ಮಸ್ಥಳ ಪ್ರಕರಣ ಸಂಬಂಧ ನಮಗೂ ಎಸ್‌ಐಟಿ ಅವರು ವರದಿ ನೀಡುತ್ತಾರೆ. ಆ ಬಳಿಕ ಅದರಲ್ಲಿ ಏನಿದೆ ಎಂದು ತಿಳಿಯಲಿದೆ ಎಂದು ಗೃಹ ಸಚಿವ ಜಿ.ಪರಮೇಶ್ವರ್ ಮಾಹಿತಿ ಒದಗಿಸಿದರು.

ಕೇಂದ್ರದಿಂದ ಸೊಸೈಟಿಗಳ ಪಡಿತರದ ಮೇಲಿನ ಕಮಿಷನ್ ದರ ಪರಿಷ್ಕರಣೆ ಮಾಡಲಾಗಿದ್ದು, ಅದನ್ನು ಪ್ರತಿ ಕ್ವಿಂಟಾಲ್‌ಗೆ 27 ರೂ.ಗಳಿಗೆ ಏರಿಸಲಾಗಿದೆ.

ಅಕ್ರಮವಾಗಿ ದನ ಸಾಗಾಟ ಮಾಡುತ್ತಿದ್ದ ವಾಹನ ಜಪ್ತಿ ಮಾಡಿರುವುದನ್ನು ಪ್ರಶ್ನಿಸಿ ಅಕ್ರಮ ಕೂಟ ಕಟ್ಟಿಕೊಂಡು ಪ್ರತಿಭಟನೆ ನಡೆಸಿದ್ದ ಪ್ರಕರಣ ಹಿಂಪಡೆಯಲು ಅನುಮತಿಸಿದ್ದ ಆದೇಶಕ್ಕೆ ಹೈಕೋರ್ಟ್ ತಡೆ ಕೊಟ್ಟಿದೆ.

7 ದಶಕಕ್ಕೂ ಹೆಚ್ಚು ಕಾಲದಿಂದ ಮಂತ್ರಾಲಯದ ಶ್ರೀರಾಘವೇಂದ್ರ ಸ್ವಾಮೀಜಿಗಳ ಮಠ ಮತ್ತು ಬೆಂಗಳೂರಿನ ಉತ್ತರಾದಿ ಮಠದ ನಡುವೆ ಇದ್ದ ಮನಸ್ತಾಪ ಇತ್ಯರ್ಥಗೊಂಡಿದೆ ಎಂದು ತಿಳಿದುಬಂದಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕ್ವಿಂಟಾಲ್ ಮೆಕ್ಕೆಜೋಳಕ್ಕೆ 3 ಸಾವಿರ ರೂಪಾಯಿ ನೀಡಿ ಮೆಕ್ಕೆಜೋಳ ಖರೀದಿ ಕೇಂದ್ರ ತೆರೆಯಬೇಕು ಎಂದು ಹಾವೇರಿ ರೈತರು ಒತ್ತಾಯಿಸಿದ್ದಾರೆ.


ಕೇಂದ್ರ ಮೋಟಾರು ವಾಹನ ನಿಯಮಗಳನ್ನು ಜಾರಿಗೆ ತರಲು ಸರ್ಕಾರ ತಕ್ಷಣ ಪರಿಣಾಮಕಾರಿ ಕ್ರಮಕೈಗೊಳ್ಳುವಂತೆ ಹೈಕೋರ್ಟ್ ತಿಳಿಸಿದೆ.

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳನ್ನು ಹೊರತುಪಡಿಸಿ ರಾಜ್ಯದ ಬೇರೆ ಯಾವುದೇ ಸ್ಥಳಗಳಲ್ಲಿ ಕಂಬಳ ಆಯೋಜಿಸದಂತೆ ನಿರ್ಬಂಧ ವಿಧಿಸುವುದಕ್ಕೆ ಹೈಕೋರ್ಟ್ ನಿರಾಕರಿಸಿದೆ.

ರೊಬೋಟಿಕ್ ತಂತ್ರಜ್ಞಾನ ಅಳವಡಿಕೆ ಯೋಜನೆಗಳಿಗೆ ಚಾಲನೆ ನೀಡಿ ಮಾತನಾಡಿದ ಡಿಸಿಎಂ ಡಿಕೆಶಿ, ರೋಬೋಟಿಕ್ ತಂತ್ರಜ್ಞಾನದ ಮೂಲಕ ಅಕ್ರಮ ಸಂಪರ್ಕಗಳನ್ನು ತಡೆಗಟ್ಟಲು ಇದೊಂದು ಉತ್ತಮ ಕ್ರಮ ಎಂದರು.

ಈ ರಕ್ಷಣಾ ಒಪ್ಪಂದ ಭಾರತ – ಅಮೆರಿಕ ಸಂಬಂಧವನ್ನು ಬಲಪಡಿಸಲು ಸಹಾಯ ಮಾಡುತ್ತದೆ ಎಂದು ಅಮೆರಿಕದ ರಕ್ಷಣಾ ಭದ್ರತಾ ಸಹಕಾರ ಸಂಸ್ಥೆ ತಿಳಿಸಿದೆ.

# ಬದನೆಕಾಯಿ ಎಣ್ಣೆಗಾಯಿ



**ಬೇಕಾಗುವ ಪದಾರ್ಥಗಳು :**
ಸಣ್ಣ ಎಳೆ ಬದನೆಕಾಯಿ –5 – 6
ಈರುಳ್ಳಿ – 1
ಹುಣಸೆ ಹಣ್ಣು – ಸ್ವಲ್ಪ
ಕರಿಬೇವಿನ ಸೊಪ್ಪು – 4 – 5
ಕೊತ್ತಂಬರಿ ಸೊಪ್ಪು – ಸ್ವಲ್ಪ
ಸಾಸಿವೆ – 1/4 ಚಮಚ
ತೆಂಗಿನ ಎಣ್ಣೆ – 4 ಚಮಚ
ಉಪ್ಪು – ರುಚಿಗೆ ತಕ್ಕಷ್ಟು

**ಮಸಾಲೆಗೆ ಬೇಕಾಗುವ ಪದಾರ್ಥಗಳು :**
ಎಳ್ಳು – 2 ಚಮಚ
ನೆಲಗಡಲೆ – 2 ಚಮಚ
ಒಣ ಮೆಣಸಿನಕಾಯಿ – 3 – 6
ದನಿಯಾ – 2 ಚಮಚ
ಜೀರಿಗೆ – 1 ಚಮಚ
ಕಡಲೆಬೇಳೆ – 2 ಚಮಚ
ಉದ್ದಿನ ಬೇಳೆ – 1 ಚಮಚ
ಮೆಂತ್ಯ – 1/4 ಚಮಚ
ಹುರಿಗಡಲೆ – 2 ಚಮಚ
ತೆಂಗಿನ ತುರಿ – 1/2 ಕಪ್

**ಮಾಡುವ ವಿಧಾನ :**
ಮೊದಲಿಗೆ ಬದನೇಕಾಯಿಯನ್ನು ತೊಳೆದು ಸೀಳಿಕೊಳ್ಳಬೇಕು, ಸೀಳಿದ ಬದನೆಕಾಯಿಯನ್ನು ಉಪ್ಪು,ಅರಶಿನ ಬೆರೆಸಿದ ನೀರಿನಲ್ಲಿ ನೆನೆಸಿಡಬೇಕು. ನಂತರ ಒಂದು ಬಾಣಲೆಯಲ್ಲಿ ಎಣ್ಣೆ ಹಾಕದೆ ಮೊದಲಿಗೆ ಎಳ್ಳು, ನೆಲಗಡಲೆಯ ಹುರಿದು ತೆಗೆದಿಟ್ಟುಕೊಳ್ಳಬೇಕು. ನಂತರ ಒಂದು ಚಮಚ ಎಣ್ಣೆ ಹಾಕಿ ಮೆಣಸಿನಕಾಯಿ, ದನಿಯಾ, ಜೀರಿಗೆ, ಕಡಲೆಬೇಳೆ, ಉದ್ದಿನ ಬೇಳೆ ಮತ್ತು ಮೆಂತ್ಯವನ್ನು ಮಧ್ಯಮ ಉರಿಯಲ್ಲಿ ಕಂದು ಬಣ್ಣಕ್ಕೆ ಬರುವವರೆಗೆ ಹುರಿದು ತಣ್ಣಗಾದ ಮೇಲೆ ತೆಂಗಿನ ತುರಿಯನ್ನು ಸ್ವಲ್ಪ ನೀರು ಸೇರಿಸಿ ಗಟ್ಟಿಯಾಗಿ ರುಬ್ಬಬೇಕು. ನಂತರ ಅದೇ ಬಾಣಲೆಗೆ ಉಳಿದ ಎಣ್ಣೆ ಹಾಕಿ ಸಾಸಿವೆ ಮತ್ತು ಕರಿಬೇವಿನ ಒಗ್ಗರಣೆ ಮಾಡಿ. ಕತ್ತರಿಸಿದ ಈರುಳ್ಳಿ ಹಾಕಿ ಬಾಡಿಸಿ. ಅರಶಿನ ಪುಡಿ ಸೇರಿಸಿ. ಈಗ ಬದನೆಕಾಯಿಯೊಳಗೆ ಅರೆದ ಮಸಾಲೆ ತುಂಬಿಸಿ, ಬಾಣಲೆಯಲ್ಲಿದ್ದ ಒಗ್ಗರಣೆಯಲ್ಲಿಟ್ಟು ನೀರು ಹಾಕದೆ ಬೇಯಿಸಿ. ಆಗಾಗ ಬದನೆಕಾಯಿಯನ್ನು ತಿರುವುತ್ತಾ ಇರಬೇಕು. ಬದನೇಕಾಯಿ ಸ್ವಲ್ಪ ಮೆತ್ತಗಾದ ಕೂಡಲೇ ಉಪ್ಪು ಮತ್ತು ಹುಣಿಸೆರಸ ಸೇರಿಸಿ ಬೇಯಿಸುವುದನ್ನು ಮುಂದುವರೆಸಿ. ಬದನೇಕಾಯಿ ಸಂಪೂರ್ಣ ಮೆತ್ತಗಾದ ಮೇಲೆ ಉಳಿದ ಮಸಾಲೆ ಮತ್ತು 1 ಕಪ್ ನೀರು ಸೇರಿಸಿ. ಒಮ್ಮೆ ಮಗುಚಿ, ಮುಚ್ಚಳ ಮುಚ್ಚಿ 5 ನಿಮಿಷಗಳ ಕಾಲ ಬೇಯಿಸಿ. ಕೊನೆಯಲ್ಲಿ ಹೆಚ್ಚಿದ ಕೊತ್ತಂಬರಿ ಸೊಪ್ಪು ಹಾಕಿದರೆ ರುಚಿಕರವಾದ ಬದನೆಕಾಯಿ ಎಣ್ಣೆಗಾಯಿ, ಸವಿಯಲು ಸಿದ್ಧ.

# ಸೌದಿ ಅರೆಬೀಯಾಗೆ ಎಫ್–35 ಯುದ್ಧ ವಿಮಾನ : ಟ್ರಂಪ್ ಒಪ್ಪಿಗೆ



ಅಮೇರಿಕ : ಅಮೆರಿಕಾ ಪ್ರವಾಸದಲ್ಲಿರುವ ಸೌದಿ ಪ್ರಿನ್ಸ್ ಮೊಹಮ್ಮದ್ ಬಿನ್ ಸಲ್ಮಾನ್ ಅವರಿಗೆ ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೌದಿ ಅರೇಬಿಯಾಗೆ ಅತ್ಯಾಧುನಿಕ ಎಫ್–35 ಯುದ್ಧ ವಿಮಾನಗಳನ್ನು ಮಾರಾಟ ಮಾಡಲು ಒಪ್ಪಿಗೆ ನೀಡುವ ಮೂಲಕ ದೊಡ್ಡ ಉಡುಗೊರೆ ನೀಡಿದ್ದಾರೆ. 2018ರಲ್ಲಿ ಅಮೆರಿಕದ ಪತ್ರಕರ್ತ ಜಮಾಲ್ ಖಶೋಗ್ಗಿ ಅವರ ಹತ್ಯೆಯ ನಂತರ, ಮೊಹಮ್ಮದ್ ಬಿನ್ ಸಲ್ಮಾನ್ ಅವರ ಮೊದಲ ಅಮೆರಿಕ ಭೇಟಿ ಅಮೆರಿಕಾ ಹಾಗೂ ಸೌದಿ ನಡುವಿನ ಸಂಬಂಧ ಬಲಪಡಿಸುವಲ್ಲಿ ನಿರ್ಣಾಯಕವಾಗಿತ್ತು.

# ಅಮೆರಿಕದಲ್ಲಿ ಆಹಾರ ವಸ್ತುಗಳಿಗೆ ಭಾರೀ ಬೆಲೆ ಏರಿಕೆ ಬಿಸಿ

ಅಮೇರಿಕಾ : ಭಾರತದ ಮೇಲೆ ಅತಿಯಾದ ತೆರಿಗೆ ವಿಧಿಸಿ ಬೀಗುತ್ತಿದ್ದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ವಾಸ್ತವದ ಅರಿವಾಗಿದೆ. ಭಾರತದ ಉತ್ಪನ್ನಗಳ ಮೇಲೆ ಶೆ. 100ರಷ್ಟು ತೆರಿಗೆ ವಿಧಿಸಿದ್ದ ಬೆನ್ನಲ್ಲಿಯೇ ಅಮೆರಿಕದಲ್ಲಿ ಆಹಾರ ವಸ್ತುಗಳ ಬೆಲೆಯಲ್ಲಿ ಭಾರೀ ಏರಿಕೆಯಾಗಿತ್ತು. ಪರಿಸ್ಥಿತಿ ಹೆಚ್ಚು ಕಡಿಮೆ ಕೈಮೀರುವ ಹಂತಕ್ಕೆ ಬಂದಿರುವ ಹಿನ್ನಲೆಯಲ್ಲಿ ಟ್ರಂಪ್ ಭಾರತದ ಚಹಾ, ಕಾಫಿ ಹಾಗೂ ಮಸಾಲೆ ಪದಾರ್ಥಗಳ ಮೇಲೆ ವಿಧಿಸಲಾಗಿದ್ದ ತೆರಿಗೆ



ಯನ್ನು ಶೇ. 50ರಷ್ಟು ಕಡಿಮೆ ಮಾಡಿರುವ ಬಗ್ಗೆ ವರದಿಯಾಗಿದೆ.

# ಬಸ್ ದುರಂತ: ಪರಿಹಾರವನ್ನು ನೀಡಲ್ಲ ಎಂದ ಸೌದಿ ಸರ್ಕಾರ !



ನವದೆಹಲಿ : ಸೌದಿ ಅರೇಬಿಯಾದಲ್ಲಿ ಭಾರತೀಯ ಮೆಕ್ಕಾ ಮದೀನಾ ಉಮ್ರಾ ಯಾತ್ರಿಗಳಿದ್ದ ಬಸ್ ದುರಂತದಲ್ಲಿ ಮೃತಪಟ್ಟ 45 ಭಾರತೀಯರ ಶವಗಳನ್ನು ಭಾರತಕ್ಕೆ ತರಲಾಗುವುದಿಲ್ಲ ಎಂದು ತಿಳಿದು ಬಂದಿದೆ. ಭಾರತೀಯ ಮೆಕ್ಕಾ ಯಾತ್ರಿಗಳನ್ನು ಕರೆದೊಯ್ಯುತ್ತಿದ್ದ ಬಸ್ ಡೀಸೆಲ್ ಟ್ಯಾಂಕರ್‌ಗೆ ಡಿಕ್ಕಿ ಹೊಡೆದ ಬಳಿಕ ಬಸ್‌ನಲ್ಲಿದ್ದ ಓರ್ವನನ್ನು ಹೊರತುಪಡಿಸಿ 45 ಪ್ರಯಾಣಿಕರು ಸಾವನ್ನಪ್ಪಿದ್ದರು. ಮೃತರ ಕುಟುಂಬದವರಿಗೆ ಪರಿಹಾರ ಪಡೆಯುವುದು ಸಹ ಕಷ್ಟಕರವಾಗಿದ್ದು, ಪರಿಹಾರ ನೀಡಲಾಗುವುದಿಲ್ಲ ಎಂದು ಸೌದಿ ಸರಕಾರ ಸ್ಪಷ್ಟಪಡಿಸಿದೆ ಎಂದು ವರದಿಯಾಗಿದೆ.

# ಕಾಂಗೋದಲ್ಲಿ ಭೀಕರ ಗಣಿ ದುರಂತ

ಕಾಂಗೋ : ರಿಪಬ್ಲಿಕ್ ಆಫ್ ಕಾಂಗೋದಲ್ಲಿ ಭೀಕರ ಗಣಿ ದುರಂತ ಸಂಭವಿಸಿದ್ದು, ಭೂಕುಸಿತ ಸಂಭವಿಸಿ ಕನಿಷ್ಠ 80 ಮಂದಿ ಸಾವಿಗೀಡಾಗಿದ್ದಾರೆ ಎಂದು ಹೇಳಲಾಗಿದೆ. ಕಾಂಗೋ ಲುವಾಲಾಬಾ ಪ್ರಾಂತ್ಯದ ತಾಮ್ರ ಮತ್ತು ಕೋಬಾಲ್ಟ್ ಗಣಿಯಲ್ಲಿ ಸೇತುವೆ ಕುಸಿದು ಕನಿಷ್ಠ 80 ಜನರು ಸಾವನ್ನಪ್ಪಿದ್ದಾರೆ. ಸ್ಥಳೀಯ ವರದಿಗಳ ಪ್ರಕಾರ, ಆಗ್ನೇಯ ಕಾಂಗೋದಲ್ಲಿರುವ ತಾಮ್ರ ಮತ್ತು ಕೋಬಾಲ್ಟ್ ಗಣಿಯಲ್ಲಿನ



ಸೇತುವೆ ಜನದಟ್ಟಣೆಯಿಂದಾಗಿ ಕುಸಿದು ಬಿದ್ದಿದೆ.

# ಬಾಂಗ್ಲಾ ಪದಚ್ಯುತ ಪ್ರಧಾನಿ ಶೇಖ್ ಹಸೀನಾಗೆ ಮರಣ ದಂಡನೆ.. !



ಢಾಕಾ: 2024ರ ವಿದ್ಯಾರ್ಥಿಗಳ ದಂಗೆಯನ್ನು ಹತ್ತಿಕ್ಕಲು ಮಾರಣಾಂತಿಕ ದಾಳಿ ನಡೆಸಿದ ಆರೋಪಕ್ಕೆ ಸಂಬಂಧಿಸಿದಂತೆ ಬಾಂಗ್ಲಾದೇಶದ ಪದಚ್ಯುತ ಪ್ರಧಾನಿ ಶೇಖ್ ಹಸೀನಾ ಅವರಿಗೆ ಬಾಂಗ್ಲಾದೇಶದ ಅಂತರರಾಷ್ಟ್ರೀಯ ಅಪರಾಧ ನ್ಯಾಯಮಂಡಳಿ ಮರಣದಂಡನೆ ವಿಧಿಸಿದೆ. ವಿದ್ಯಾರ್ಥಿಗಳ ದಂಗೆಯನ್ನು ಹತ್ತಿಕ್ಕಲು ಮಾರಣಾಂತಿಕ ದಾಳಿ ನಡೆಸಿದ ಆರೋಪಕ್ಕೆ ಸಂಬಂಧಿಸಿದಂತೆ ಶೇಖ್ ಹಸೀನಾ, ಮಾಜಿ ಗೃಹ ಸಚಿವ ಅಸಾದುಜ್ಜಾಮಾನ್ ಖಾನ್ ಕಮಲ್ ಹಾಗೂ ಮಾಜಿ ಐಜಿಪಿ ಚೌಧರಿ ಅಬ್ದುಲ್ಲಾ ಅಲ್–ಮುಮುನ್ ಅವರ ವಿರುದ್ಧ ಪ್ರಕರಣಗಳು ದಾಖಲಾಗಿದ್ದವು.

# ಭಾರತ – ಅಫ್ಘಾನಿಸ್ತಾನ ಎದುರಿಸಲು ಸಿದ್ಧರಿದ್ದೇವೆ : ಪಾಕಿಸ್ತಾನ

ಇಸ್ಲಮಾಬಾದ್ : ಪಾಕಿಸ್ತಾನದ ರಕ್ಷಣಾ ಸಚಿವ ಖವಾಜಾ ಅಸಿಫ್ ಅವರು ಭಾರತದ ಪೂರ್ವ ಗಡಿಯಲ್ಲಿ ಮತ್ತು ಪಾಕಿಸ್ತಾನದ ಪಶ್ಚಿಮ ಗಡಿಯಲ್ಲಿರುವ ತಾಲಿಬಾನ್‌ಗಳ ವಿರುದ್ಧ ಎರಡು ರಂಗಗಳ ಯುದ್ಧಕ್ಕೆ ದೇಶವು ಸಂಪೂರ್ಣವಾಗಿ ಸಿದ್ಧವಾಗಿದೆ ಎಂದು ಹೇಳಿಕೆ ನೀಡಿದ್ದಾರೆ. ಇತ್ತೀಚೆಗೆ ಇಸ್ಲಾಮಾಬಾದ್‌ನಲ್ಲಿ ನಡೆದ ಆತ್ಮಹತ್ಯಾ ಬಾಂಬ್ ದಾಳಿಯ ನಂತರ ಈ ಹೇಳಿಕೆ ಬಂದಿದೆ. ಈ ದಾಳಿಯ ಹೊಣೆಯ



ನ್ನು ಪಾಕಿಸ್ತಾನಿ ತಾಲಿಬಾನ್ ಹೊತ್ತುಕೊಂಡಿದೆ.

# ಆರ್. ಅಶ್ವಿನ್‌ರ ದಾಖಲೆಯನ್ನು ಜಸ್ ಪ್ರೀತ್ ಬುಮ್ರಾರಿಂದ ಧೂಳಿಪಟ



ಕೋಲ್ಕತಾ: ದಕ್ಷಿಣ ಆಫ್ರಿಕಾ ವಿರುದ್ಧದ ಮೊದಲ ಟೆಸ್ಟ್ ಪಂದ್ಯದಲ್ಲಿ ಭಾರತದ ಪರ ಮಾರಕ ಬೌಲಿಂಗ್ ಪ್ರದರ್ಶನ ನೀಡಿದ ವೇಗಿ ಜಸ್ ಪ್ರೀತ್ ಬುಮ್ರಾ ಆರ್. ಅಶ್ವಿನ್‌ರ ದಾಖಲೆಯನ್ನು ಧೂಳಿಪಟ ಮಾಡಿದ್ದಾರೆ. 5 ವಿಕೆಟ್ ಪಡೆದ ಬುಮ್ರಾ ಮಾಜಿ ಸ್ಪಿನ್ನರ್ ಆರ್ ಅಶ್ವಿನ್ ಅವರ ದಾಖಲೆಯನ್ನು ಮುರಿದರು.

# 2028 ಲಾಸ್ ಎಂಜಲೀಸ್ ಒಲಿಂಪಿಕ್ಸ್ ವೇಳಾಪಟ್ಟಿ ಪ್ರಕಟ

ಲಾಸ್ ಏಂಜಲೀಸ್ : 2028ರಲ್ಲಿ ಲಾಸ್ ಏಂಜಲೀಸ್‌ನಲ್ಲಿ ನಡೆಯಲಿರುವ ಒಲಿಂಪಿಕ್ಸ್ ಕ್ರೀಡಾಕೂಟದ ವೇಳಾಪಟ್ಟಿಯನ್ನು ಈಗಾಗಲೇ ಘೋಷಿಸಲಾಗಿದೆ. ಆ ಪ್ರಕಾರ ಈ ಕ್ರೀಡಾಕೂಟ ಜುಲೈ 14, 2028 ರಿಂದ ಪ್ರಾರಂಭವಾಗಲಿದ್ದು, ಜುಲೈ 30 ರವರೆಗೆ ನಡೆಯಲಿದೆ. ಇದುವರೆಗೆ ನಡೆದ ಒಲಿಂಪಿಕ್ ಕ್ರೀಡಾಕೂಟಕ್ಕೆ ಹೋಲಿಸಿದರೆ ಇದು ಅತಿದೊಡ್ಡ ಸ್ಪರ್ಧೆಯಾಗಿದ್ದು, ಲಾಸ್ ಏಂಜಲೀಸ್ ಮತ್ತು ಒಕ್ಲಹೋಮ ನಗರ



ದಲ್ಲಿ 49 ಸ್ಥಳಗಳು ಮತ್ತು 18 ವಲಯಗಳನ್ನು ಈ ಪಂದ್ಯಾವಳಿಗಾಗಿ ನಿರ್ಧರಿಸಲಾಗಿದೆ.

# ಬೆಂ–ತಮಕೂರು ಮೆಟ್ರೋ ಹೂಡಿಕೆಗೆ ಕತಾರ್ ಕಂಪನಿ ಉತ್ಸುಕ



ಬೆಂಗಳೂರು: ಬೆಂಗಳೂರು–ತುಮಕೂರು ನಡುವಿನ ಮೆಟ್ರೋ ಯೋಜನೆಗೆ ಹೂಡಿಕೆ ಮಾಡಲು ಕತಾರ್ ಮೂಲದ ಕಂಪನಿಯು ಮುಂದೆ ಬಂದಿದ್ದು, ಈ ಸಂಬಂಧ ಮುಖ್ಯಮಂತ್ರಿಗೆ ಅಧಿಕೃತವಾಗಿ ಪತ್ರ ಕೂಡ ನೀಡಿದೆ ಎಂದು ಸಚಿವ ಡಾ.ಜಿ. ಪರಮೇಶ್ವರ್ ತಿಳಿಸಿದರು. ಉದ್ದೇಶಿತ ಈ ಯೋಜನೆಯಲ್ಲಿ ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ ಕೈಗೆತ್ತಿಕೊಳ್ಳಲಾಗುತ್ತಿದೆ. ಇದಕ್ಕಾಗಿ ಎರಡು–ಮೂರು ಕಂಪನಿಗಳು ಹೂಡಿಕೆ ಮಾಡಲು ಮುಂದೆ ಬಂದಿವೆ. ಅಷ್ಟೇ ಅಲ್ಲ, ತಾವು ಹೂಡಿಕೆ ಮಾಡಲು ಸಿದ್ಧರಿರುವುದಾಗಿ ಖತಾರ್ ಮೂಲದ ಕಂಪನಿಯವರು ಮುಖ್ಯಮಂತ್ರಿಗೆ ಅಧಿಕೃತವಾಗಿ ಪತ್ರ ನೀಡಿದ್ದಾರೆ ಎಂದು ಹೇಳಿದರು.

# ರಾಜ್ಯ ಸರ್ಕಾರದಿಂದ ಮೇಡ್‌ಇನ್ ಕರ್ನಾಟಕ ಕಂಪ್ಯೂಟರ್ ಅಭಿವೃದ್ಧಿ

ಬೆಂಗಳೂರು: ರಾಜ್ಯ ಸರ್ಕಾರದಿಂದ ಮೇಡ್ ಇನ್ ಕರ್ನಾಟಕ ಕಂಪ್ಯೂಟರ್ ಅಭಿವೃದ್ಧಿಪಡಿಸಲಾಗಿದ್ದು, ಸರ್ಕಾರದಿಂದಲೇ ಕಂಪ್ಯೂಟರ್ ಅಭಿವೃದ್ಧಿ ವಿಶ್ವದಲ್ಲೇ ಮೊದಲು. 'ಕಿಯೋ' ಬುಕಿಮಗ್ ಶುರುವಾಗಲಿದ್ದು, ಎರಡು ತಿಂಗಳಲ್ಲಿ ಡೆಲಿವರಿ ಮಾಡಲಾಗುವುದು. ಕೈಗೆಟುಕುವ ದರದಲ್ಲಿ ಕಂಪ್ಯೂಟರ್ ಸಿಗಲಿದೆ. ಐಟಿಬಿಟಿ ಇಲಾಖೆ,




ಕಿಯೋನಿಕ್ಸ್ ಸಹಯೋಗದಲ್ಲಿ ಕರ್ನಾಟಕದ ಸ್ಟಾರ್ಟ್ ಅಪ್‌ಗಳು ನಿರ್ಮಿಸಿರುವ ಕೃತಕ ಬುದ್ಧಿಮತ್ತೆ ಆಧಾರಿತ ಕಿಯೋ ಹೆಸರಿನ ಕಂಪ್ಯೂಟರ್ ಮುಖ್ಯಮಂತ್ರಿ ಸಿದ್ದರಾ ಮಯ್ಯ ಬೆಂಗಳೂರು ಟೆಕ್ ಸಮಿಟ್ 2025ರ ಉದ್ಘಾಟನೆ ಸಮಾರಂಭದಲ್ಲಿ ಬಿಡುಗಡೆ ಮಾಡಲಿದ್ದಾರೆ ಎಂದು ಪ್ರೀಯಾಂಕ ಖರ್ಗೆ ತಿಳಿಸಿದ್ದಾರೆ.

# ಮಹಾರಾಷ್ಟ್ರದಲ್ಲಿ ಕಬ್ಬಿಗೆ ಅಧಿಕ ದರ : ರಾಜ್ಯದಲ್ಲಿ ರೈತರ ವಲಸೆ

ಬೆಳಗಾವಿ : ಕಬ್ಬಿಗೆ ಉತ್ತಮ ರಿಕವರಿ ಹಾಗೂ ಎಫ್‌ಆರ್‌ಪಿ ದರ ಕೊಡುತ್ತಿರುವ ಮಹಾರಾಷ್ಟ್ರ ಸಕ್ಕರೆ ಕಾರ್ಖಾನೆಗಳತ್ತ ರಾಜ್ಯದ ಕಬ್ಬು ಬೆಳೆಗಾರರು ಹೆಚ್ಚು ಆಕರ್ಷಿತರಾಗುತ್ತಿದ್ದಾರೆ. ಬೆಳಗಾವಿ, ಬಾಗಲಕೋಟೆ ಜಿಲ್ಲೆಯ ರೈತರು ಮಹಾರಾಷ್ಟ್ರದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಪೂರೈಸುತ್ತಿರುವ ಕಾರಣ ರಾಜ್ಯದ ಸಣ್ಣ ಪುಟ್ಟ ಸಕ್ಕರೆ ಕಾರ್ಖಾನೆಗಳು ಕಬ್ಬಿನ ಲಭ್ಯತೆ ಕೊರತೆಯಿಂದ ಬಳಲುತ್ತಿವೆ. ಮಹಾರಾಷ್ಟ್ರದಲ್ಲಿ ಎಫ್‌ಆರ್‌ಪಿ ದರ ಹಾಗೂ ಪಾವತಿ ವ್ಯವಸ್ಥೆಯು ರಾಜ್ಯಕ್ಕೆ ಹೋಲಿಸಿದರೆ ಉತ್ತಮವಾಗಿದೆ. ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಗಳು ರಿಕವರಿ ಪ್ರಮಾಣವನ್ನು ಕಡಿಮೆ ತೋರಿಸುವ ಮೂಲಕ ರೈತರನ್ನು ವಂಚಿಸುತ್ತಿವೆ ಎಂದು ರೈತರು ಆರೋಪಿಸುತ್ತಿದ್ದಾರೆ.



# ಮೈಸೂರಿನಲ್ಲಿ ಬರಲಿದೆ ದೇಶದ ಮೊದಲ ರೇಷ್ಮೆ ವಸ್ತುಸಂಗ್ರಹಾಲಯ!

ಬೆಂಗಳೂರು : ವಿಶ್ವಪ್ರಸಿದ್ಧ ಮೈಸೂರು ರೇಷ್ಮೆಯ ಜನ್ಮಸ್ಥಳ ಮೈಸೂರಿನಲ್ಲಿ ದೇಶದ ಮೊದಲ ರೇಷ್ಮೆ ವಸ್ತುಸಂಗ್ರಹಾಲಯ ತಲೆ ಎತ್ತಲಿದೆ. ಈ ವಸ್ತುಸಂಗ್ರಹಾಲಯವು ಭಾರತದಲ್ಲಿ ರೇಷ್ಮೆಯ ಇತಿಹಾಸವನ್ನು ಪ್ರದರ್ಶಿಸಲಿದ್ದು, ರೇಷ್ಮೆ ಗೂಡುಗಳು ಮತ್ತು ಬಟ್ಟೆ ಉತ್ಪಾದನೆಯಲ್ಲಿ ಬಳಸುವ ಇತರ ವಸ್ತುಗಳನ್ನು



ಒಳಗೊಂಡಿರುತ್ತದೆ. ಕೇಂದ್ರ ರೇಷ್ಮೆ ಮಂಡಳಿ (CSB) ಅಡಿಯಲ್ಲಿ ಬರುವ ರಾಷ್ಟ್ರೀಯ ರೇಷ್ಮೆ ಹುಳು ಬೀಜ ಸಂಸ್ಥೆ (NSSO) ನಿರ್ದೇಶಕಿ ಡಾ. ಎಸ್. ಮಂತ್ರಿರಾ ಮೂರ್ತಿ, ಪ್ರಸ್ತಾವಿತ ವಸ್ತುಸಂಗ್ರಹಾಲಯವನ್ನು 120ಎಕರೆ ವಿಶಾಲವಾದ ಕ್ಯಾಂಪಸ್‌ನಲ್ಲಿ ಸಿಎಸ್‌ಬಿ ಆವರಣದಲ್ಲಿ ಸ್ಥಾಪಿಸಲಾಗುವುದು ಎಂದು ಹೇಳಿದರು.


# ಕಲಬುರಗಿ ಜಿಲ್ಲೆಗೆ ಮಧ್ಯಂತರ ಬೆಳೆ ವಿಮೆ ಮಂಜೂರು



ಕಲಬುರಗಿ: ಅತಿವೃಷ್ಟಿಯಿಂದ ಮುಂಗಾರು ಹಂಗಾಮಿನ ಬೆಳೆಗಳೆಲ್ಲ ಸಂಪೂರ್ಣ ಹಾನಿಯಾಗಿದ್ದರಿಂದ ರೈತರ ನೆರವಿಗೆ ಬರುವ ನಿಟ್ಟಿನಲ್ಲಿ 243 ಕೋಟಿ ರೂ ಬೆಳೆ ವಿಮೆ ಮಂಜೂರಾತಿಯಾಗಿರುತ್ತದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು. ಅತಿವೃಷ್ಟಿಯಿಂದ ಆಗಿರುವ ಬೆಳೆ ಹಾನಿಯ ಕುರಿತಾಗಿ ಸಿಎಂ ಹಾಗೂ ತಾವೆಲ್ಲರೂ ವೀಕ್ಷಿಸುವ ಜತೆಗೆ ಎನ್‌ಡಿಆರ್ ಎಫ್–ಎಸ್‌ಡಿಆರ್‌ಎಫ್ ನಿಯಮಾವಳಿ ಪ್ರಕಾರ ಬೆಳೆಹಾನಿ ವರದಿ ರೂಪಿಸಿದ್ದರ ಹಿನ್ನೆಲೆಯಲ್ಲಿ ಜತೆಗೆ ಸರ್ಕಾರದ ನಿರ್ದೇಶನ ಮೇರೆಗೆ ಮಧ್ಯಂತರ ಬೆಳೆವಿಮೆ ಪರಿಹಾರ ಮಂಜೂರಾತಿಯಾಗಿದ್ದು, 3ವಾರದೊಳಗೆ ರೈತರ ಖಾತೆಗೆ ಜಮಾ ಆಗಲಿದೆ ಎಂದರು.

# ಚಿತ್ತಾಪುರ ಗಲಭೆ ಕೇಸ್ ಹಿಂಪಡೆದ ನಿರ್ಧಾರಕ್ಕೆ ಹೈಕೋರ್ಟ್ ತಡೆಯಾಜ್ಞೆ

ಕಲಬುರಗಿ : 2019ರಲ್ಲಿ ಚಿತ್ತಾಪುರದಲ್ಲಿ ಅಕ್ರಮವಾಗಿ ಸಾಗಾಟ ಮಾಡುತ್ತಿದ್ದ ಹಸುಗಳನ್ನು ಸೀಜ್ ಮಾಡಿದ ಪೊಲೀಸರ ಮೇಲೆ ಕಲ್ಲು ತೂರಿದ ಗಲಭೆಕೋರರ ವಿರುದ್ಧದ ಪ್ರಕರಣ ವಾಪಸ್ ಪಡೆದ ಮ್ಯಾಜಿಸ್ಟ್ರೇಟ್ ಆದೇ ಶಕ್ಕೆ ಹೈಕೋರ್ಟ್‌ನ ಕಲಬುರಗಿ ಪೀಠ ತಡೆ ನೀಡಿದೆ. ಆದೇಶದ ದಾಖಲೆಗಳನ್ನು ಸಲ್ಲಿಸಲು ಸೂಚನೆ ನೀಡಿ, ವಿಚಾರಣೆಯನ್ನು



ಮುಂದೂಡಿದೆ. ಚಿತ್ತಾಪುರ ಗಲಭೆಕೋರರ ವಿರುದ್ಧದ ಕೇಸ್ ಹಿಂಪಡೆದ ಸರ್ಕಾರಕ್ಕೆ ಹಿನ್ನಡೆಯಾಗಿದೆ. ಘಟನೆಗೆ ಸಂಬಂಧಿಸಿ ಮೂವತ್ತು ಮಂದಿಯ ವಿರುದ್ಧ ಪ್ರಕರಣ ದಾಖಲಿಸಲಾಗಿತ್ತು. ಇತ್ತೀಚೆಗೆ ನಡೆದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಈ ಗಲಭೆಕೋರರ ವಿರುದ್ಧದ ಎಲ್ಲಾ ಕೇಸ್‌ಗಳನ್ನು ವಾಪಸ್ ಪಡೆಯಲಾಗಿತ್ತು.

# ಬಿಹಾರ ಗೆಲುವು ಪ್ರಧಾನಿಯ ವಿಕಸಿತ ಭಾರತಕ್ಕೆ ಸಂದ ಜನಾದೇಶ : ಕ್ಯಾ. ಚೌಟ

ಮಂಗಳೂರು: ಬಿಹಾರ ವಿಧಾನಸಭೆ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟ ಮತ್ತೊಮ್ಮೆ ಐತಿಹಾಸಿಕ ಗೆಲುವು ಸಾಧಿಸಿದ್ದು, ಈ ಫಲಿತಾಂಶವು ಬಿಜೆಪಿಗೆ ಮತ್ತಷ್ಟು ಬಲ ನೀಡಲಿದೆ. ಅಷ್ಟೇಅಲ್ಲ, ಕಾಂಗ್ರೆಸ್ ನಾಯಕರ ಸುಳ್ಳು ವೋಟ್ ಚೋರಿ ಆರೋಪಕ್ಕೆ ಬಿಹಾರದ ಮತದಾರರು ತಕ್ಕ ಪಾಠ ಕಲಿಸಿದ್ದಾರೆ ಎಂದು ದಕ್ಷಿಣ ಕನ್ನಡ ಸಂಸದ ಕ್ಯಾ. ಬ್ರಿಜೇಶ್ ಚೌಟ ಹೇಳಿದ್ದಾರೆ. ಕಾಂಗ್ರೆಸ್ ಮತ್ತು ಮಹಾಘಟಬಂಧನ್ ಪಕ್ಷಗಳು ಪದೇ ಪದೇ 'ವೋಟ್ ಚೋರಿ' ಎಂಬ ಸುಳ್ಳು ಮತ್ತು ಆಧಾರರಹಿತ ಅಪಪ್ರಚಾರ ಮಾಡಿ ಇಡೀ ಚುನಾವಣಾ ವ್ಯವಸ್ಥೆಯ ಮೇಲೆ ಜನರಿಗೆ ಅಪನಂಬಿಕೆ ಹುಟ್ಟಿಸಲು ಯತ್ನಿಸಿದ್ದವು ಎಂದರು.



# ಫಡ್ನವೀಸ್ ನೇತೃತ್ವದ ಸಂಪುಟ ಸಭೆ ಬಹಿಷ್ಕರಿಸಿದ ಶಿಂಧೆ ಬಣ

ಮುಂಬೈ: ಮಹಾರಾಷ್ಟ್ರದ ಆಡಳಿತಾರೂಢ ಮಹಾಯುತಿ ಮೈತ್ರಿಕೂಟದಲ್ಲಿನ ಬಿರುಕು ಮತ್ತಷ್ಟು ದೊಡ್ಡದಾಗಿದ್ದು, ಡೊಂಬಿವಲಿಯ ಸೇನಾ ನಾಯಕರೊಬ್ಬರನ್ನು ಬಿಜೆಪಿಗೆ ಸೇರಿಸಿಕೊಳ್ಳುವುದನ್ನು ವಿರೋಧಿಸಿ, ಏಕನಾಥ್ ಶಿಂಧೆ ನೇತೃತ್ವದ ಶಿವಸೇನೆಯ ಸಚಿವರು ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅಧ್ಯಕ್ಷತೆಯಲ್ಲಿ ನಡೆದ



ಸಚಿವ ಸಂಪುಟ ಸಭೆಯನ್ನು ಬಹಿಷ್ಕರಿ ಸಿದ್ದಾರೆ. ಮಹಾರಾಷ್ಟ್ರ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಮುನ್ನ ಮಹಾಯುತಿ ಮೈತ್ರಿಕೂ ಟದಲ್ಲಿ ಭಿನ್ನಮತ ಸ್ಫೋಟಗೊಂಡಿದ್ದು, ನಾಸಿಕ್ ಜಿಲ್ಲೆಯ ಯೆಯೋಲಾದಲ್ಲಿ ಶಿಂಧೆ ಅವರ ಶಿವಸೇನೆಯು ಪ್ರತಿಪಕ್ಷದ ಭಾಗವಾಗಿರುವ ಎನ್‌ಸಿಪಿ(ಎಸ್‌ಪಿ) ಜೊತೆ ಕೈಜೋಡಿಸಲು ನಿರ್ಧರಿಸಿದೆ.

# ಶಬರಿಮಲೆಯಲ್ಲಿ ಭಕ್ತರ ಪ್ರವಾಹ..!



ಶಬರಿಮಲೆ: ಮಂಡಲ – ಮಕರವಿಳಕ್ಕು ಮಹೋತ್ಸವಕ್ಕಾಗಿ ಶಬರಿಮಲೆ ದೇವಸ್ಥಾನ ತೆರೆದ ಅನಂತರ ವೃಶ್ಚಿಕ ಮಾಸದ ಎರಡನೇ ದಿನ ಕ್ಷೇತ್ರ ತಲುಪಿದ ಭಕ್ತರ ಸಂಖ್ಯೆ ಎರಡು ಲಕ್ಷ ತಲುಪಿದ್ದು, ಕೆಲವರು ದಿನ ಪೂರ್ತಿ ಸರತಿನಲ್ಲಿ ನಿಂತು ಕೂಡ ಅಯ್ಯಪ್ಪನ ದರ್ಶನ ಸಾಧ್ಯವಾಗದೆ ನಿರಾಶರಾಗಿದ್ದಾರೆ. ಕೆಲವರು ಸಕಾಲದಲ್ಲಿ ಆಹಾರ, ನೀರು ಸೇವಿಸಲು ಸಾಧ್ಯವಾಗದೆ ತೊಂದರೆ ಅನುಭವಿಸಿದ್ದಾರೆ. ಇಷ್ಟು ದೊಡ್ಡ ಭಕ್ತರ ಪ್ರವಾಹವನ್ನು ನಿಯಂತ್ರಿಸಲು ಕೇವಲ 18,000 ಪೊಲೀಸರು ಮಾತ್ರ ಸ್ಥಳದಲ್ಲಿದ್ದರು. ದರ್ಶನ ಅವಧಿಯನ್ನು ಎರಡು ಗಂಟೆ ವಿಸ್ತರಿಸಲಾಗಿದೆ ಎಂದು ಸ್ಥಳದಲ್ಲಿರುವ ತಿರುವಾಂಕೂರು ದೇವಸ್ವಂ ಮಂಡಳಿ ತಿಳಿಸಿದೆ.

# ಭಾರತದ ಪ್ರಧಾನಿಯನ್ನು ಬಂಧಿಸಬೇಕೆಂದು ಮನವಿ !


ಜೋಹಾನ್ಸ್ ಬರ್ಗ್ – ಇಲ್ಲಿ ನಡೆಯಲಿರುವ ಜಿ–20 ಸಮಾವೇಶಕ್ಕೂ ಮುನ್ನವೇ ಕೆಲವು ಸಂಘಟನೆಗಳು ಮುಸ್ಲಿಂ ವಕೀಲರ ಸಂಘದ ಸಾರಥ್ಯದಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಅಂತಾರಾಷ್ಟ್ರೀಯ ಅಪರಾಧ ಕಾನೂನಿನಡಿ ವಿಚಾರಣೆ ನಡೆಸಬೇಕೆಂದು ದಕ್ಷಿಣ ಆಫ್ರಿಕಾ ಪೊಲೀಸ್ ಮುಖ್ಯಸ್ಥರಿಗೆ, ಅಪ




ರಾಧ ತನಿಖಾ ಸಂಸ್ಥೆಗಳಿಗೆ ದೂರು ನೀಡಿದೆ. ಕಾಶೀರದಲ್ಲಿ ಮಾನವ ಹಕ್ಕು ಉಲ್ಲಂಘನೆಯಾಗುತ್ತಿದೆಯೆಂದು ಆರೋಪಿಸಿರುವ ದಿ ಸೌತ್‌ಆಫ್ರಿಕಾ ಕಾಶೀರ ಆಯಕ್ಷನ್ ಗ್ರೂಪ್ ಮತ್ತು ಮುಸ್ಲಿಂ ವಕೀಲ ಸಂಘ ಜೋಹಾನ್ಸ್ ಬರ್ಗ್‌ಗೆ ಆಗಮಿಸಲಿರುವ ಭಾರತದ ಪ್ರಧಾನಿಯನ್ನು ಬಂಧಿಸಬೇಕೆಂದು ಮನವಿ ಸಲ್ಲಿಸಿದೆ.

# 9–9–6 ಮಾದರಿ ಕೆಲಸ ಅನಿವಾರ್ಯ : ನಾರಾಯಣ ಮೂರ್ತಿ

ನವದೆಹಲಿ–ಇನ್ಫೋಸಿಸ್ ಸಂಸ್ಥಾಪಕ ನಾರಾಯಣ ಮೂರ್ತಿ ಮತ್ತೊಮೆ ಯುವ ಜನಾಂಗ ಹೆಚ್ಚು ಕಾಲ ಕೆಲಸ ಮಾಡಬೇಕು ಎಂದು ಸಲಹೆ ನೀಡಿದ್ದು, ಅದಕ್ಕೆ ಚೀನಾದ 9–9–6 ಮಾದರಿಯ ಉದಾಹರಣೆ ನೀಡಿ ಗಮನ ಸೆಳೆದಿದ್ದಾರೆ. ಯುವ ಜನಾಂಗ ಭಾರತವನ್ನು ವೇಗವಾಗಿ ಬೆಳೆಸಲು ಸಹಾಯ ಮಾಡಲು ಹೆಚ್ಚು ಸಮಯ ಕೆಲಸ ಮಾಡಬೇಕು ಎಂಬ ತಮ್ಮ ದೀರ್ಘಕಾಲದ ದೃಷ್ಟಿಕೋನವನ್ನು ಬೆಂಬಲಿಸಲು ಚೀನಾದ ಪ್ರಸಿದ್ಧ 9–9–6 ಕೆಲಸದ ಸಂಸ್ಕೃತಿಯನ್ನು ಮೂರ್ತಿ ಉಲ್ಲೇಖಿಸಿದ್ದಾರೆ. ಭಾರತೀಯರು ವಾರಕ್ಕೆ 70 ಗಂಟೆಗಳ ಕಾಲ ಕೆಲಸ ಮಾಡಬೇಕು ಎಂದು ಹೇಳಿದಾಗ ವ್ಯಾಪಕ ಚರ್ಚೆಗೆ ಕಾರಣರಾಗಿದ್ದರು.






# 'ಚಿತ್ರಲಹರಿ' ಟೀಸರ್ ಹಾಗೂ ಹಾಡುಗಳು ಅನಾವರಣ

ಕೇಸರಿ ನಂದನ ಸಿನಿ ಕ್ರಿಯೇಷನ್ಸ್ ಲಾಂಛನದಲ್ಲಿ ನವನೀತ ಲಕ್ಷ್ಮೀ ಅವರು ನಿರ್ಮಿಸಿರುವ ಹಾಗೂ ಕೆ.ಆರ್ ಸುರೇಶ್ ನಿರ್ದೇಶನದ 'ಚಿತ್ರಲಹರಿ' ಚಿತ್ರದ ಟೀಸರ್ ಹಾಗೂ ಹಾಡುಗಳ ಬಿಡುಗಡೆ ಸಮಾರಂಭ ಇತ್ತೀಚೆಗೆ ಅದ್ದೂರಿಯಾಗಿ ನೆರವೇರಿತು. ಟೀಸರ್ ಅನ್ನು ಕನ್ನಡ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಕೃಷ್ಣೇಗೌಡ ಅವರು ಹಾಗೂ ಹಾಡುಗಳನ್ನು ಹಿರಿಯ ನಿರ್ದೇಶಕ ಪುರುಷೋತ್ತಮ್ ಬಿಡುಗಡೆ ಮಾಡಿದರು. ನಂತರ ಗಣ್ಯರು ಹಾಗೂ ಚಿತ್ರತಂಡದ ಸದಸ್ಯರು ಮಾತನಾಡಿದರು. ನಿರ್ದೇಶಕರು ಸಂಭಾಷಣೆ ಇಲ್ಲದೆ ಟೀಸರ್ ಸಿದ್ದ ಮಾಡಿದ್ದಾರೆ. ಇದು ನನಗೆ ಬಹಳ ಹಿಡಿಸಿತು. ಚಿತ್ರ ಅದ್ದೂರಿ ಯಶಸ್ಸು ಕಾಣಲಿ ಎಂದು ಹಾರೈಸಿದ ಕನ್ನಡ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಕೃಷ್ಣೇಗೌಡ ಅವರು, ಸರ್ಕಾರ ಈ ವರ್ಷದಿಂದ ಚಿತ್ರಗಳಿಗೆ ನೀಡುತ್ತಿದ್ದ ಪ್ರೋತ್ಸಾಹ ಧನವನ್ನು ನಿಲ್ಲಿಸುವ ಯೋಚನೆಯಲ್ಲಿದೆ. ಹಾಗಾದರೆ ಕನ್ನಡ ಚಿತ್ರಗಳಿಗೆ ಬಹಳ ತೊಂದರೆಯಾಗುತ್ತದೆ. ಈ ಕುರಿತು ಸದ್ಯದಲ್ಲೇ ಚಿತ್ರರಂಗದ ಗಣ್ಯರ ಜೊತೆಗೂಡಿ ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಲಾಗುವುದು ಎಂದರು. ಹಾಡುಗಳನ್ನು ಬಿಡುಗಡೆ ಮಾಡಿ ಚಿತ್ರಕ್ಕೆ ಶುಭ ಹಾರೈಸಿದ ಹಿರಿಯ ನಿರ್ದೇಶಕ ಪುರುಷೋತ್ತಮ್, ನಾನು ಈ ಚಿತ್ರದಲ್ಲಿ ಅಭಿನಯಿಸಿರುವುದಾಗಿ ಹೇಳಿದರು. "ಚಿತ್ರಲಹರಿ" ಎರಡು ಕಥೆಗಳ ಸುತ್ತ ಈ ಚಿತ್ರದ ಕಥೆ ಸಾಗುತ್ತದೆ. ಕರೋನ ಸಮಯದಲ್ಲೇ ಸಿದ್ದವಾದ ಕಥೆಯಿದು. ಆದರೆ ಕಳೆದ ವರ್ಷ ಚಿತ್ರೀಕರಣ ಆರಂಭವಾಯಿತು. ಬೆಂಗಳೂರಿನಲ್ಲೇ ಬಹುತೇಕ ಚಿತ್ರೀಕರಣ ನಡೆದಿದೆ. ಚಿತ್ರ ತೆರೆಗೆ ಬರಲು ಸಿದ್ದವಾಗಿದೆ. ಸತೀಶ್ ಬಾಬು ಅವರು ಒಳ್ಳೆಯ ಹಾಡುಗಳನ್ನು ನೀಡಿದ್ದಾರೆ. ಅದರೆ ದುರದೃಷ್ಟವಶಾತ್ ಚಿತ್ರ ಬಿಡುಗಡೆ ಹೊತ್ತಿಗೆ ನಮ್ಮೊಂದಿಗಿಲ್ಲ ಎಂದರು.




# ಭಯೋತ್ಪಾದನೆಯ ವಿರುದ್ಧ ಸಮರ. ಅದುವೇ 'ರಕ್ತಕಾಶ್ಮೀರ'

MDM ಪ್ರೊಡಕ್ಷನ್ ಲಾಂಛನದಲ್ಲಿ ನಿರ್ಮಾಣವಾಗಿರುವ, ವೃತ್ತಿಜೀವನದಲ್ಲಿ ಐವತ್ತು ವರ್ಷಗಳನ್ನು ಪೂರೈಸಿರುವ ಹಿರಿಯ ನಿರ್ದೇಶಕ ಎಸ್.ವಿ. ರಾಜೇಂದ್ರ ಸಿಂಗ್ ಬಾಬು ನಿರ್ದೇಶನದ ಹಾಗೂ ರಿಯಲ್ ಸ್ಟಾರ್ ಉಪೇಂದ್ರ-ರಮ್ಯ ಮುಖ್ಯಪಾತ್ರದಲ್ಲಿ ನಟಿಸಿರುವ "ರಕ್ತ ಕಾಶ್ಮೀರ" ಚಿತ್ರ ಸದ್ಯದಲ್ಲೇ ತೆರೆಗೆ ಬರಲಿದೆ ಈ ಕುರಿತು ಮಾಹಿತಿ ನೀಡಲು ನಿರ್ದೇಶಕರು ಪತ್ರಿಕಾಗೋಷ್ಠಿ ಆಯೋಜಿಸಿದ್ದರು. ಪತ್ರಿಕಾಗೋಷ್ಠಿಗೂ ಮುನ್ನ ಚಿತ್ರದ ಎರಡು ಹಾಡುಗಳು ಹಾಗೂ ಟ್ರೇಲರನ್ನು ಪ್ರದರ್ಶಿಸಲಾಯಿತು. "ರಕ್ತ ಕಾಶ್ಮೀರ" ಒಂದು ಸಾಮಾಜಿಕ ಸಂದೇಶವುಳ್ಳ ಚಿತ್ರ. ಭಯೋತ್ಪಾದನೆಯ ವಿರುದ್ಧ ಸಮರ ಸಾರುವ ಚಿತ್ರವೂ ಹೌದು. ಉಪೇಂದ್ರ ಅವರು ಈ ಚಿತ್ರದಲ್ಲಿ ದ್ವಿಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ರಮ್ಯ ಈ ಚಿತ್ರದ ನಾಯಕಿ. ಚಿತ್ರದಲ್ಲಿ ನಾಯಕ (ಉಪೇಂದ್ರ) ಮಕ್ಕಳಿಗೆ ಭಯೋತ್ಪಾದನೆಯ ವಿರುದ್ಧ ಹೋರಾಡುವುದು ಹೇಗೆ ಎಂಬುದನ್ನು ಮಕ್ಕಳಿಗೆ ತರಬೇತಿ ನೀಡಿರುತ್ತಾರೆ. ಈ ಸನ್ನಿವೇಶ ಎದುರಾದಾಗ ಮಕ್ಕಳು ಹೇಗೆ ಪಾರಾಗುತ್ತಾರೆ ಹಾಗೂ ನಗರದಲ್ಲಿ ನಡೆಯಬಹುದಾದಾ ಭಾರಿ ಸ್ಫೋಟವನ್ನು ಹೇಗೆ ತಪಿಸುತ್ತಾರೆ ಎಂಬುದನ್ನು ಈ ಚಿತ್ರದಲ್ಲಿ ತೋರಿಸಲಾಗಿದೆ. 'ನಾಗರಹೊಳೆ' ಚಿತ್ರದ ನಂತರ ಮಕ್ಕಳನ್ನು ಪ್ರಧಾನವಾಗಿಟ್ಟುಕೊಂಡು ಮಾಡಿರುವ ಚಿತ್ರವಿದು. ಇದರಲ್ಲಿ ನೂರಕ್ಕೂ ಅಧಿಕ ಮಕ್ಕಳು ಅಭಿನಯಿಸಿದ್ದಾರೆ. ಪ್ರಮುಖ ಪಾತ್ರದಲ್ಲಿ ಏಳುಜನ ಮಕ್ಕಳು ನಟಿಸಿದ್ದಾರೆ. ಚಿತ್ರದ ವಿಶೇಷವೆಂದರೆ ಈ ಚಿತ್ರದಲ್ಲಿ ಹದಿನೆಂಟು ನಿಮಿಷದ ಒಂದು ಹಾಡು. ಈ ಹಾಡಿನಲ್ಲಿ ವಿಷ್ಣುವರ್ಧನ್, ಅಂಬರೀಶ್, ಶ್ರೀನಾಥ್, ಶಿವರಾಜಕುಮಾರ್, ಪುನೀತ್ ರಾಜಕುಮಾರ್, ಜಗ್ಗೇಶ್, ಉಪೇಂದ್ರ, ರಮೇಶ್ ಅರವಿಂದ್, ದರ್ಶನ್, ಜೈ ಜಗದೀಶ್, ಆದಿತ್ಯ, ರಾಕ್‌ಲೈನ್ ವೆಂಕಟೇಶ್ ಸೇರಿದಂತೆ ಕನ್ನಡದ ದಿಗ್ಗಜ ನಾಯಕರು ಅಭಿನಯಿಸಿದ್ದಾರೆ. ಒಂದೇ ಹಾಡಿನಲ್ಲಿ ಇಷ್ಟು ಜನ ನಾಯಕರು ಅಭಿನಯಿಸಿರುವ ದಾಖಲೆ ಯಾವ ಭಾಷೆಯ ಚಿತ್ರದಲ್ಲೂ ಇಲ್ಲ.




# ಭಾರತಿ ಟೀಚರ್ ಏಳನೇ ತರಗತಿ ಟ್ರೇಲರ್ ಲೋಕಾರ್ಪಣೆ

ಭಾರತಿ ಟೀಚರ್ ಏಳನೇ ತರಗತಿ ಚಿತ್ರದ 'ಬಾ ಬಾ ಕನ್ನಡಿಗ', 'ಎಳೆ ಜೀವ' ಹಾಡುಗಳು ಮತ್ತು ಟ್ರೇಲರ್ ಬಿಡುಗಡೆ ಸಮಾರಂಭವು ಮೊದಲಿಗೆ ಪತ್ರಕರ್ತರ ಸಂವಾದದೊಂದಿಗೆ ಕಲಾವಿದರ ಸಂಘದಲ್ಲಿ ಅದ್ದೂರಿಯಾಗಿ ನಡೆಯಿತು. ಕೆ.ಎಸ್.ಎಸ್.ಎ. ಸಂಘದ ಅಧ್ಯಕ್ಷ ಎನ್.ಸಿ.ಪ್ರಕಾಶ್ ಕಾರ್ಯಕ್ರಮಕ್ಕೆ ಚಾಲನೆ ನೀಡಿ ತಂಡಕ್ಕೆ ಶುಭ ಹಾರೈಸಿದರು. ಆ ನಂತರ ವೀರಲೋಕ ಪ್ರಕಾಶನ ಸಂಸ್ಥೆ ಜಯನಗರದ ಶಾಲಿನಿ ಮೈದಾನದಲ್ಲಿ ನಡೆಸುತ್ತಿದ್ದ ಪುಸ್ತಕ ಸಂತೆಯ ವೇದಿಕೆಯಲ್ಲಿ ಶಿಕ್ಷಣ ಮಂತ್ರಿಗಳಾದ ಮಧುಬಂಗಾರಪ್ಪನವರ ಹಾರೈಕೆಗಳೊಂದಿಗೆ ಲೋಕಾರ್ಪಣೆಗೊಂಡಿತು. ಸಚಿವರು ಆಸಕ್ತಿಯಿಂದ ಕಥೆ ಕೇಳಿ ಶಿಕ್ಷಣದ ಪ್ರಾಮುಖ್ಯತೆ ಬಗ್ಗೆ ಇರುವುದರಿಂದ ಚಿತ್ರವನ್ನು ನೋಡಲೇಬೇಕು ಎಂಬ ಆಶಯವನ್ನು ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ನಿರ್ದೇಶಕ ರಾಜೇಂದ್ರಸಿಂಗ್‌ಬಾಬು ಇತರೆ ಗಣ್ಯರು ಹಾಜರಿದ್ದರು. ಸಿರಗುಪ್ಪ ಮೂಲದ ಉದ್ಯಮಿ ರಾಘವೇಂದ್ರ ರೆಡ್ಡಿ ಅವರು ಪೂಜ್ಯಾಯ ಫಿಲಂಸ್ ಅಡಿಯಲ್ಲಿ ನಿರ್ಮಾಣ ಮಾಡುತ್ತಿರುವುದು ಹೊಸ ಅನುಭವ. ಕಥೆ, ಚಿತ್ರಕಥೆ, ಸಂಭಾಷಣೆ, ಸಾಹಿತ್ಯ, ಸಂಗೀತ ಮತ್ತು ನಿರ್ದೇಶನವನ್ನು ಎಂ.ಎಲ್. ಪ್ರಸನ್ನ ನಿರ್ವಹಿಸಿದ್ದಾರೆ. ಕ್ರಿಷಿ ಸಂಸ್ಥೆಯ ವೆಂಕಟ್‌ಗೌಡ ಕ್ರಿಯೇಟೀವ್ ಹೆಡ್ ಆಗಿರುತ್ತಾರೆ. ಕನ್ನಡ ಪರ ಹೋರಾಟಗಾರನಾಗಿ ರೋಹಿತ್ ರಾಘವೇಂದ್ರ ನಾಯಕ. ಶಿಕ್ಷಕರಾಗಿ ಸಿಹಿಕಹಿಚಂದ್ರು, ಟೈಟಲ್ ರೋಲ್‌ದಲ್ಲಿ ಕು.ಯಶಿಕಾ, ಕಾಮಿ ಡಿ ಕಿಲಾಡಿಗಳು ಖ್ಯಾತಿಯ ಗೋವಿಂದೇಗೌಡ ಮೊದಲಬಾರಿ ಖಳ ನಾಗಿ ಕಾಣಿಸಿಕೊಂಡರೆ, ಇನ್ಸ್ ಪೆಕ್ಟರ್ ಆಗಿ ಅಶ್ವಿನ್‌ಹಾಸನ್. ಉಳಿದಂತೆ ದಿವ್ಯಾ ಅಂಚನ್, ಬೆನಕಾ ನಂಜಪ್ಪ, ಸೌಜನ್ಯ ಸುನಿಲ್, ಎಂ.ಜೆ.ರಂಗಸ್ವಾಮಿ ಮುಂತಾದವರು ನಟಿಸಿದ್ದಾರೆ.




# 'ನೆನಪುಗಳ ಮಾತು ಮಧುರ' ತೆರೆಗೆ ಬರಲು ಸಿದ್ಧ

ಪತ್ರಕರ್ತ, ಕಾರ್ಯಕಾರಿ ನಿರ್ಮಾಪಕನಾಗಿ ಚಿತ್ರರಂಗಕ್ಕೆ ಪರಿಚಯವಿರುವ ಅಫ್ಜಲ್ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನೃತ್ಯ ನಿರ್ದೇಶನದ ಜೊತೆಗೆ ನಿರ್ದೇಶನವನ್ನು ಮಾಡಿರುವ ಹಾಗೂ RED & WHITE ಸೆವೆನ್‌ರಾಜ್ ನಟಿಸಿ, ನಿರ್ಮಿಸಿರುವ "ನೆನಪುಗಳ ಮಾತು ಮಧುರ" ಚಿತ್ರದ ಟ್ರೇಲರ್ ಇತ್ತೀಚಿಗೆ ಬಿಡುಗಡೆಯಾಯಿತು. ಕನ್ನಡ ಚಲನಚಿತ್ರ ನಿರ್ಮಾಪಕರ ಸಂಘದ ಅಧ್ಯಕ್ಷರಾದ ಉಮೇಶ್ ಬಣಕಾರ್ ಟ್ರೇಲರ್ ಅನಾವರಣ ಮಾಡಿ ಶುಭ ಕೋರಿದರು. ನವಶಕ್ತಿ ನಾಗರಾಜ್, ಮಹೇಂದರ್, ಲೋಕೇಂದ್ರ, ಮುನಿಕೃಷ್ಣ ಮುಂತಾದವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಟ್ರೇಲರ್ ಬಿಡುಗಡೆ ನಂತರ ಚಿತ್ರತಂಡದ ಸದಸ್ಯರು ಮಾತನಾಡಿದರು. ನನಗೂ ಚಿತ್ರರಂಗಕ್ಕೂ ಮೂವತ್ತೈದು ವರ್ಷಗಳ ನಂಟು. "ರುದ್ರ ತಾಂಡವ", "ಮತ್ಸರ", "ಅನುಕೂಲಕೊಬ್ಬ ಗಂಡ" ಸೇರಿದಂತೆ ಅನೇಕ ಅನೇಕ ಚಿತ್ರಗಳಲ್ಲಿ ನಟಿಸಿದ್ದೇನೆ. ಕನ್ನಡ ಹಾಗೂ ಮಲಯಾಳಂ ಭಾಷೆಗಳಲ್ಲಿ ಕಲಾವಿದನಾಗಿ ಗುರುತಿಸಿಕೊಂಡಿದ್ದೇನೆ. ಈ ಹಿಂದೆ ಎರಡು ಚಿತ್ರಗಳನ್ನು ನಿರ್ಮಾಣ ಕೂಡ ಮಾಡಿದ್ದೇನೆ. "ನೆನಪುಗಳ ಮಾತು ಮಧುರ" ನನ್ನ ನಿರ್ಮಾಣದ ಮೂರನೇ ಚಿತ್ರ. ಈ ಚಿತ್ರದಲ್ಲೂ ಅಭಿನಯಿಸಿದ್ದೇನೆ. ನನ್ನ ಹುಟ್ಟುಹಬ್ಬದ ದಿನ ಟ್ರೇಲರ್ ಬಿಡುಗಡೆಯಾಗಿದ್ದು ಖುಷಿಯಾಗಿದೆ. ನೋಡುಗನಿಗೆ ಬೇಕಾದ ಎಲ್ಲಾ ಅಂಶಗಳು ಈ ಚಿತ್ರದಲ್ಲಿದೆ. ಸದ್ಯದಲ್ಲೇ ಚಿತ್ರ ತೆರೆಗೆ ಬರಲಿದೆ. ಈ ಚಿತ್ರದ ಬಿಡುಗಡೆ ನಂತರ ನನ್ನ ಜೀವನ ಚರಿತ್ರೆಯನ್ನೇ ಸಿನಿಮಾ ಮಾಡುತ್ತಿದ್ದೇನೆ. ಚಿತ್ರಕ್ಕೆ "7ರಿಂದ 77" ಎಂದು ಹೆಸರಿಟ್ಟಿದ್ದೇನೆ ಎಂದರು ರೆಡ್ & ವೈಟ್ ಸೆವೆನ್ ರಾಜ್. "ನೆನಪುಗಳ ಮಾತು ಮಧುರ" ನಾಲ್ಕು ಕಥೆಗಳ ಸಂಗಮ ಎಂದರು.




# ನಾಲ್ಕನೇ ಬಾರಿಗೆ ಜೊತೆಯಾದ ಬಾಲಯ್ಯ ಹಾಗೂ ನಯನತಾರಾ

ವೀರ ಸಿಂಹ ರೆಡ್ಡಿ ಸೂಪರ್ ಸಕ್ಸಸ್ ಬಳಿಕ ಬಾಲಯ್ಯ ನಿರ್ದೇಶಕ ಗೋಪಿಚಂದ್? ಮಲಿನೇನಿ ಮತ್ತೊಮ್ಮೆ ಕೈ ಜೋಡಿಸಿದ್ದಾರೆ.




ಸದ್ಯ ರಾಮ್ ಚರಣ್‌ಗೆ ಪೆದ್ದಿ ಚಿತ್ರ ನಿರ್ಮಾಣ ಮಾಡುತ್ತಿರುವ ವೃದ್ಧಿ ಸಿನಿಮಾಸ್ ಬ್ಯಾನರ್ ಅಡಿಯಲ್ಲಿ ವೆಂಕಟ ಸತೀಶ್ ಕಿಲಾರು ಈ ಸಿನಿಮಾ ನಿರ್ಮಾಣ ಮಾಡುತ್ತಿದ್ದಾರೆ. ಇದೀಗ ಚಿತ್ರತಂಡ ನಾಯಕಿಯನ್ನು ಪರಿಚಯಿಸಿದೆ. ಬಾಲಕೃಷ್ಣಗೆ ಜೋಡಿಯಾಗಿ ಲೇಡಿ ಸೂಪರ್ ಸ್ಟಾರ್ ನಯನತಾರಾ ಸಾಥ್ ಕೊಡುತ್ತಿದ್ದಾರೆ. ಇಂದು ನಯನ್ ಬರ್ತಡೇ ವಿಶೇಷವಾಗಿ ಸ್ಪೆಷಲ್ ವಿಡಿಯೋ ಮೂಲಕ ಸ್ವಾಗತಿಸಿದೆ. ಅಂದಹಾಗೇ ಸಿಂಹ, ಜೈ ಸಿಂಹ ಮತ್ತು ಶ್ರೀ ರಾಮ ರಾಜ್ಯಂ ಚಿತ್ರಗಳ ಬಳಿಕ ನಾಲ್ಕನೇ ಬಾರಿಗೆ ಬಾಲಯ್ಯ ಹಾಗೂ ನಯನತಾರಾ ಒಂದಾಗುತ್ತಿದ್ದಾರೆ. ಈ ಯಶಸ್ವಿ ಜೋಡಿಯನ್ನು ಮತ್ತೊಮ್ಮೆ ತೆರೆಯ ಮೇಲೆ ನೋಡಲು ಪ್ರೇಕ್ಷಕರು ಉತ್ಸುಕರಾಗಿದ್ದಾರೆ. ಗೋಪಿಚಂದ್ ಮಲನೇನಿ ಅವರು ಈ ಬಾರಿ ಐತಿಹಾಸಿಕ ಕಥೆಯನ್ನು ಹೇಳೋದಿಕ್ಕೆ ಹೊರಟಿದ್ದು, ಕಮರ್ಷಿಯಲ್ ಹಿಟ್ ಕೊಟ್ಟಿರುವ ಬಾಲಯ್ಯ ಅವರನ್ನು ಹೊಸ ಗೆಟಪ್‌ನಲ್ಲಿ ಪ್ರೇಕ್ಷಕರಿಗೆ ತೋರಿಸಲು ಯೋಜನೆ ಹಾಕಿಕೊಂಡಿದ್ದಾರೆ.

# 29 ವರ್ಷಗಳ ಬಳಿಕ ಒಂದಾದ ಎ.ಆರ್. ರೆಹಮಾನ್ ಮತ್ತು ಪ್ರಭುದೇವ

ದಕ್ಷಿಣ ಭಾರತದ ಖ್ಯಾತ ಸಂಗೀತ ಸಂಸ್ಥೆ 'ಲಹರಿ ಮ್ಯೂಸಿಕ್' ಇದೀಗ ಇಬ್ಬರು ದಿಗ್ಗಜರನ್ನು ಮತ್ತೆ ಒಟ್ಟುಗೂಡಿಸುತ್ತಿದೆ. ಎ.ಆರ್. ರೆಹಮಾನ್ ಮತ್ತು ಪ್ರಭುದೇವ ಅವರನ್ನು ಬರೋಬ್ಬರಿ 29 ವರ್ಷಗಳ ನಂತರ ಲಹರಿ ಸಂಸ್ಥೆ ಕರೆತರುತ್ತಿದೆ. 'ಮೂನ್‌ವಾಕ್' ಸಿನಿಮಾದ ಸಂಗೀತ ಹಕ್ಕುಗಳನ್ನು ಈ ಸಂಸ್ಥೆ ಅಧಿಕೃತವಾಗಿ ಪಡೆದುಕೊಂಡಿದೆ. ಬಿಹೈಂಡ್‌ವುಡ್ಸ್‌ನ ಮನೋಜ್ ನಿರ್ಮಲಾ ಶ್ರೀಧರನ್ ಅವರ ನೇತೃತ್ವದಲ್ಲಿ 'ಮೂನ್ ವಾಕ್' ಸಿನಿಮಾ ನಿರ್ಮಾಣವಾಗುತ್ತಿದೆ. ಸಂಗೀತ, ನೃತ್ಯ ಮತ್ತು ಕೌಟುಂಬಿಕ ಕಥಾ ಹಂದರದ ಸಿನಿಮಾ ಇದಾಗಿದ್ದು, ಆಸ್ಕರ್ ಪ್ರಶಸ್ತಿ ವಿಜೇತ ಮಾಂತ್ರಿಕ ಎ.ಆರ್. ರೆಹಮಾನ್ ಅವರು ಈ ಚಿತ್ರಕ್ಕೆ ಸಂಗೀತ ನೀಡಿದ್ದಾರೆ.




# ಈ ವಾರ ತೆರೆಯ ಮೇಲೆ ಕುಂತೀಪುತ್ರ 'ರಾಧೇಯ'

ಹಲವಾರು ನಿರ್ದೇಶಕರ ಜತೆ ಕೆಲಸ ಮಾಡಿ ಅನುಭವ ಪಡೆದ ವೇದಗುರು ಅವರು ಇದೇ ಮೊದಲ ಬಾರಿಗೆ ಆಕ್ಷನ್-ಕಟ್ ಹೇಳಿರುವ, ಕೃಷ್ಣ ಅಜೇಯ್ ರಾವ್ ನಾಯಕನಾಗಿ ಅಭಿನಯಿಸಿರುವ ಚಿತ್ರ 'ರಾಧೇಯ' ರಾಜ್ಯಾದ್ಯಂತ ಅದ್ದೂರಿಯಾಗಿ ತೆರೆ ಕಾಣುತ್ತಿದೆ. ಕೀರ್ತಿ ಚಾಹ್ವಾ ಸಿನಿಮಾ ಕಾರ್ಖಾನೆ ಮೂಲಕ ವೇದ್ ಗುರು ಅವರೇ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಕೃಷ್ಣ ಅಜೇಯ್ ರಾವ್ ಹಾಗೂ ಸೋನಾಲ್ ಮಂತೆರೋ ಚಿತ್ರದ ನಾಯಕ-ನಾಯಕಿಯಾಗಿ ಅಭಿನಯಿಸಿದ್ದಾರೆ. ಮಹಾಭಾರತದ ಕರ್ಣನ ಇನ್ನೊಂದು ಹೆಸರು 'ರಾಧೇಯ'. ಕರ್ಣನ ಸಾಕು ತಾಯಿ ರಾಧಾ ಆಗಿದ್ದರಿಂದ, ಕರ್ಣನಿಗೆ ರಾಧೇಯ ಎಂದೂ ಕರೆಯುತ್ತಾರೆ. ಕರ್ಣನಲ್ಲಿದ್ದ ತ್ಯಾಗದ ಗುಣ ನಾಯಕನಿಗಿರೋದ್ರಿಂದ ಆ ಹೆಸರನ್ನಿಡಲಾಗಿದೆ. ಇದೊಂದು ಲವ್ ಜಾನರ್ ಚಿತ್ರವಾದರೂ ಬೇರೆಯದೇ ರೀತಿ ಕಟ್ಟಿಕೊಡಲು ನಿರ್ದೇಶಕರು ಪ್ರಯತ್ನಿಸಿದ್ದಾರೆ. ನಾಯಕ ರಾಧೇಯ ತನ್ನ ಪ್ರೀತಿಯನ್ನು ಹೇಗೆ ಉಳಿಸಿಕೊಳ್ಳುತ್ತಾನೆ. ಅದಕ್ಕಾಗಿ ಆತ ಏನೆಲ್ಲಾ ಅಡ್ಡಿ, ಆತಂಕಗಳನ್ನು ಎದುರಿಸಿ ಗೆದ್ದು ಬರುತ್ತಾನೆ ಎಂದು ಲವ್ ಸ್ಟೋರಿಯೊಂದಿಗೆ ನಿರ್ದೇಶಕರು ಹೇಳಿದ್ದಾರೆ.




# ರಾಜಮೌಳಿ-ಮಹೇಶ್‌ಬಾಬು ಹೊಸ ಚಿತ್ರ 'ವಾರಣಾಸಿ'

RRR ಚಿತ್ರದ ನಂತರ ಮಹೇಶ್ ಬಾಬು ಅಭಿನಯದಲ್ಲಿ ಎಸ್.ಎಸ್. ರಾಜಮೌಳಿ ಒಂದು ಚಿತ್ರ ನಿರ್ದೇಶಿಸುತ್ತಿರುವ ಸುದ್ದಿ ಕೇಳಿ ಬಂದಿತ್ತು. ಆ ಚಿತ್ರದ ಹೆಸರೇನು, ಕಥೆ ಏನಿರಬಹುದು, ಚಿತ್ರ ಯಾವ ಹಂತದಲ್ಲಿದೆ ಮುಂತಾದ ಹಲವು ಪ್ರಶ್ನೆಗಳಿಗೆ ರಾಜಮೌಳಿ ಕೊನೆಗೂ ಉತ್ತರ ನೀಡಿದ್ದಾರೆ. ಚಿತ್ರಕ್ಕೆ 'ವಾರಣಾಸಿ' ಎಂಬ ಹೆಸರಿಡಲಾಗಿದ್ದು, ಈ ಚಿತ್ರದ ಟೈಟಲ್ ಟೀಸರ್, ಶನಿವಾರ ರಾತ್ರಿ ಹೈದರಾಬಾದ್‌ನ ರಾಮೋಜಿ ಫಿಲಂ ಸಿಟಿಯಲ್ಲಿ ಅದ್ದೂರಿಯಾಗಿ ಬಿಡುಗಡೆಯಾಗಿದೆ. 'ವಾರಣಾಸಿ' ಚಿತ್ರದ ಟೈಟಲ್‌ಟೀಸರ್ ಅನಾವರಣಕ್ಕೆಂದೇ ದೊಡ್ಡ ಸಮಾರಂಭವೊಂದನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ 50ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸುವುದರ ಜೊತೆಗೆ ದೇಶ-ವಿದೇಶಗಳಿಂದ ಮಾಧ್ಯಮದವರು ಸಾಕ್ಷಿಯಾಗಿದ್ದರು. 110/130 ಅಡಿಯ ಬೃಹತ್ತಾದ ಎಲ್.ಇ.ಡಿ ಪರದೆಯನ್ನು ಈ ಕಾರ್ಯಕ್ರಮಕ್ಕಾಗಿ ಸೃಷ್ಟಿಸಲಾಗಿತ್ತು. ಅದಕ್ಕಾಗಿ 45 ಜನರೇಟರ್‌ಗಳನ್ನು ಬಳಸಲಾಗಿತ್ತು. ವೇದಿಕೆಯ ಮೇಲೆ ವಾರಣಾಸಿಯ ಮಣಿಕರ್ಣಿಕಾ ಘಾಟನ್ನು ಪ್ರತಿನಿಧಿಸುವ ಸೆಟ್‌ಗಳನ್ನು ನಿರ್ಮಿಸಲಾಗಿತ್ತು.




# ರೋರಿಂಗ್ ಸ್ಟಾರ್ ಶ್ರೀಮುರಳಿ ಅವರಿಂದ ಟ್ರೇಲರ್ ಅನಾವರಣ

ರಂಗಿ ತರಂಗ', 'ಅವನೇ ಶ್ರೀಮನ್ನಾರಾಯಣ'ದಂತಹ ಯಶಸ್ವಿ ಚಿತ್ರಗಳ ನಿರ್ಮಾಪಕ ಹೆಚ್.ಕೆ ಪ್ರಕಾಶ್ ನಿರ್ಮಾಣದ "ದಿಯಾ", "ಬ್ಲಿಂಕ್" ಸೇರಿದಂತೆ ಯಶಸ್ವಿ ಸಿನಿಮಾಗಳ ಮೂಲಕ ಜನಪ್ರಿಯರಾಗಿರುವ ದೀಕ್ಷಿತ್ ಶೆಟ್ಟಿ ನಾಯಕರಾಗಿ ಮತ್ತು ಬೃಂದಾ ಆಚಾರ್ಯ ನಾಯಕಿಯಾಗಿ ನಟಿಸಿರುವ ಹಾಗೂ ಅಭಿಷೇಕ್ ಎಂ ನಿರ್ದೇಶನದ "ಬ್ಯಾಂಕ್ ಆಫ್ ಭಾಗ್ಯಲಕ್ಷ್ಮೀ" ಚಿತ್ರದ ಟ್ರೇಲರ್ ಬಿಡುಗಡೆ ಸಮಾರಂಭ ಅದ್ದೂರಿಯಾಗಿ ನೆರವೇರಿತು. ರೋರಿಂಗ್ ಸ್ಟಾರ್ ಶ್ರೀಮುರಳಿ ಟ್ರೇಲರ್ ಅನಾವರಣ ಮಾಡಿ ಚಿತ್ರ ತಂಡಕ್ಕೆ ಶುಭ ಕೋರಿದರು. ನೆನಪಿರಲಿ ಪ್ರೇಮ್, ಮೇಘನಾ ಗಾಂವ್ಕರ್, ಲಹರಿ ವೇಲು ಮುಂತಾದ ಗಣ್ಯರು ಸಮಾರಂಭಕ್ಕೆ ಆಗಮಿಸಿ ಯಶಸ್ವಿಯಾಗಲೆಂದು ಹಾರೈಸಿದರು. ಸ್ನೇಹಿತರ ಜೊತೆ ಸೇರಿ 'ಪಿನಾಕ' ಎಂಬ ವಿ.ಎಫ್.ಎಕ್ಸ್ ಸ್ಟುಡಿಯೋ ನಡೆಸುತ್ತಿದ್ದೇನೆ. ನಿರ್ದೇಶಕನಾಗಿ ಇದು ಮೊದಲ ಚಿತ್ರ ಎಂದರು.




# ವಿಭಿನ್ನ ಶೀರ್ಷಿಕೆ ರುಧ ಮುಹೂರ್ತ

ಮಹಿಳಾ ಪ್ರಧಾನ ರುಧ ಸಿನಿಮಾದ ಮುಹೂರ್ತ ಸಮಾರಂಭವು ಸಂಜಯ್‌ನಗರದಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿಗಳ ಬೃಂದಾವನ ಸನ್ನಿಧಿಯಲ್ಲಿ ನಡೆಯಿತು. ಪ್ರಥಮ ದೃಶ್ಯಕ್ಕೆ ನಟಿ ಅನುಪ್ರಭಾಕರ್ ಮತ್ತು ರಘುಮುಖರ್ಜಿ ಕ್ಲಾಪ್ ಮಾಡಿ ಶುಭ ಹಾರೈಸಿದರು. ಕನಕಪುರ ಮೂಲದ ಉದ್ಯಮಿ ಪುಟ್ಟರಾಜು ಅವರು ಕೆಪಿಜಿ ವಿಷನ್ಸ್ ಬ್ಯಾನರ್ ಅಡಿಯಲ್ಲಿ ಬಂಡವಾಳ ಹೂಡುತ್ತಿರುವುದು ಮಾಡುತ್ತಿರುವುದು ಹೊಸ ಅನುಭವ. ಹಲವು ನಿರ್ದೇಶಕ ಬಳಿ ಕೆಲಸ ಮಾಡಿ, 'ಐತಲಕ್ಕಡಿ' ಕಂತುಗಳಿಗೆ ಸ್ಕ್ರಿಪ್ಟ್ ರೈಟರ್ ಆಗಿದ್ದ ಶರತ್ ಶಿಡ್ಲಘಟ್ಟ ಸಿನಿಮಾಕ್ಕೆ ಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ.






# "ಜೈ" ಚಿತ್ರಕ್ಕೆ ಸೈ ಎಂದ ಪ್ರೇಕ್ಷಕರು..



'ಜೈ'ಎಂಬ ತುಳು ಮತ್ತು ಕನ್ನಡ ಚಿತ್ರವೊಂದು ಇತ್ತೀಚೆಗೆ ತೆರೆಕಂಡಿದೆ. 1994ರಲ್ಲಿ ಐಎಎಸ್ ಅಧಿಕಾರಿಯಾದ ಕೆ ಶಿವರಾಂ ಅಭಿನಯದಲ್ಲಿ ಇದೇ ಹೆಸರಿನಲ್ಲಿ ಚಿತ್ರವೊಂದು ಬಂದಿತ್ತು. ಆದರೆ ಅದೇ ಬೇರೆ ಇದೆ ಬೇರೆ. ಈಗ ಬಿಡುಗಡೆಗೊಂಡ ಜೈ ಚಿತ್ರ ರೂಪೇಶ್ ಶೆಟ್ಟಿಯವರ ಕೂಸು. ಒಬ್ಬ ನಿರ್ದೇಶಕನಿಗೆ ಮನರಂಜನೆ ಜೊತೆ ಸಾಮಾಜಿಕ ಕಳಕಳಿ ಇರಬೇಕೆನ್ನುವುದನ್ನ ಸಾಬೀತು ಪಡಿಸಿದ್ದಾರೆ. ರೂಪೇಶ್ ಶೆಟ್ಟಿಯವರ ಈ ಚಿತ್ರದಲ್ಲಿ ಮನರಂಜನೆಗೂ ಕೊರತೆಯಾಗದೆ ಈ ಸಮಾಜಕ್ಕೆ ಒಂದು ಒಳ್ಳೇ ಸಂದೇಶವನ್ನು ಕೊಟ್ಟಿದ್ದಾರೆ. ಅದರಲ್ಲೂ ತಾಯಿ ಸೆಂಟಿಮೆಂಟ್ ಮನಮುಟ್ಟುವಂತಹದ್ದು. ಕಲಾವಿದರು ತಂತ್ರಜ್ಞರು ಅವರವರ ಕಾರ್ಯಕ್ಕೆ ನ್ಯಾಯ ಒದಗಿಸಿದ್ದಾರೆ. ಅದರಲ್ಲೂ ಸುನಿಲ್ ಶೆಟ್ಟಿ, ದೀಪಕ್ ಅವರ ಅಭಿನಯ ದಬರ್ದಸ್ತಾಗಿದೆ. ಕಲಾಭಿಮಾನಿಗಳು ಒಂದು ಸಾರಿ ಈ ಚಿತ್ರವನ್ನು ನೋಡಿ ಹಾರೈಸಿ,,

# ವಾದಿರಾಜ ವಾಲಗ ಮಂಡಳಿಗೆ ಮುಹೂರ್ತ..




ಡಾ.ಎಂ.ಎನ್.ರಾಜೇಂದ್ರ ಕುವಾರ್ ಮತ್ತೊಂದು ಕನ್ನಡ ಚಿತ್ರಕ್ಕೆ ಬಂಡವಾಳ ಹೂಡುತ್ತಿದ್ದಾರೆ. ಯುವ ನಿರ್ದೇಶಕರನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಯುವ ನಿರ್ದೇಶಕ, ಕಾಂತಾರ ಸಿನೆಮಾದ "ವರಾಹ ರೂಪಂ" "ಕಾಂತಾರ–1ರ "ಗೊತ್ತಿಲ್ಲಾ ಶಿವನೇ ಭಕ್ತಿ ದಾರಿಯು" ಹಾಡುಗಳನ್ನು ರಚಿಸಿರುವ ಶಶಿ ರಾಜ್ ರಾವ್ ಕಾವೂರು ರಚಿಸಿ, ನಿರ್ದೇಶನ ಮಾಡಲಿದ್ದು, ಚಿತ್ರಕ್ಕೆ "ವಾದಿರಾಜ ವಾಲಗ ಮಂಡಳಿ' ಎಂದು ಹೆಸರಿಡಲಾಗಿದೆ. ಎಂ.ಎನ್.ಆರ್ ಪ್ರೊಡಕ್ಷನ್ ಸಂಸ್ಥೆಯು 2009ರಲ್ಲಿ ಆರಂಭಗೊಂಡಿದ್ದು, "ಜೋಗುಳ" ಮೆಗಾ ಧಾರಾವಾಹಿಯನ್ನು ನಿರ್ಮಿಸಿದೆ. ಹಾಗೇ ಎಂ.ಡಿ.ಶ್ರೀಧರ್ ಅವರ ನಿರ್ದೇಶನದಲ್ಲಿ "ಗಲಾಟೆ" ಎಂಬ ಸಿನೆಮಾ ನಟ ಪ್ರಜ್ವಲ್ ದೇವರಾಜ್ ಹಾಗೂ ಬಹುತಾರಾಗಣದಲ್ಲಿ ನಿರ್ಮಾಣವಾಗಿದ್ದು, ಇದು ಬಹುಪಾಲು ವಿದೇಶದಲ್ಲಿ ಚಿತ್ರೀಕರಣಗೊಂಡಿದೆ.

# ಕ್ರಿಮಿನಲ್‌ನಲ್ಲಿ ಧ್ರುವಗೆ ರಚಿತಾ ರಾಮ್ ಜೋಡಿ..

ಆಕ್ಷನ್ ಪ್ರಿನ್ಸ್ ಧ್ರುವ ಸರ್ಜಾ ಹೊಸ ಸಿನಿಮಾ ಬೆಂಗಳೂರಿನ ಬಸವನಗುಡಿಯ ಅನ್ನಪೂರ್ಣ ನವ ಮಂತ್ರಾಲಯ ಮಂದಿರದಲ್ಲಿ ಮುಹೂರ್ತ ಸಮಾರಂಭ ನೆರವೇರಿದೆ. ಇದು ಧ್ರುವ ಅವರ ಏಳನೇ ಚಿತ್ರವಾಗಿದ್ದು, ನಾಯಕಿಯಾಗಿ ರಚಿತಾ ರಾಮ್ ಸಾಥ್ ಕೊಡುತ್ತಿದ್ದಾರೆ. ಉತ್ತರ ಕರ್ನಾಟಕದ ಸೊಗಡಿನಲ್ಲಿ ಮೂಡಿಬರುತ್ತಿರುವ ಈ ಸಿನಿಮಾ ನೈಜ ಘಟನೆ ಆಧರಿಸಿದ್ದು, ಚಿತ್ರಕ್ಕೆ ಕ್ರಿಮಿನಲ್ ಎಂಬ ಟೈಟಲ್ ಇಡಲಾಗಿದೆ. ಮುಹೂರ್ತದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ನಿರ್ದೇಶಕ ರಾಜ್ ಗುರು, ಕಥೆ ಹೇಳಿ ಧ್ರುವ ಸರ್ಜಾ ಒಕೆ ಮಾಡಿದರು. ಬಳಿಕ ಸೆಲ್ಫಿ ತೆಗೆದುಕೊಂಡೆ. ಸೆಲ್ಫಿ ನೋಡಿ ಖುಷಿ ಜೊತೆ ಭಯ ಶುರುವಾಯ್ತು. ಇದು ಜವಾಬ್ದಾರಿ ಎಂಬ ಭಯ. ಉತ್ತರ ಕರ್ನಾಟಕದ ಬಗ್ಗೆ ಸಿನಿಮಾ ಮಾಡುತ್ತಿದ್ದೇವೆ. ದೊಡ್ಡ ಪ್ರೊಡಕ್ಷನ್ ಕಂಪನಿ ನನಗೆ ಅವಕಾಶ ಕೊಟ್ಟಿದೆ. ಇದು ನನ್ನ ಎರಡನೇ ಸಿನಿಮಾ ಎಂದರು.




# ನ.21 'ಫುಲ್ ಮಿಲ್ಸ್' ರಾಜ್ಯಾದ್ಯಂತ ಬಿಡುಗಡೆ..

"ಫುಲ್ ಮೀಲ್ಸ್" ಸಿನಿಮಾ ನ.21ರಂದು ರಾಜ್ಯಾದ್ಯಂತ ಬಿಡುಗಡೆಯಾಗಲಿದೆ ಎಂದು ನಾಯಕ ನಟರಾದ ಲಿಖಿತ್ ಶೆಟ್ಟಿ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು. ಚಿತ್ರದ ನಿರ್ದೇಶಕ ವಿನಾಯಕ್ ಇನ್ಸ್ಟಾಗ್ರಾಮ್ ಮೂಲಕ ನನ್ನನ್ನು ಸಂಪರ್ಕಿಸಿದರು. ಅವರು ಹೇಳಿದ ಕಥೆ ಕೇಳಿ ಖುಷಿಯಾಗಿ ಸಿನಿಮಾಕ್ಕೆ ಬಂಡವಾಳ ಹಾಕಿದ್ದೇನೆ. ಒರಿಯರ್ದೊರಿ ಅಸಲ್, ಮದಿಮೆ ಸಿನಿಮಾದಲ್ಲಿ ನಟಿಸಲು ಅವಕಾಶ ಕೊಟ್ಟು ನನ್ನನ್ನು ಬೆಳೆಸಿರುವ ಹಿರಿಯ ರಂಗಭೂಮಿ ಕಲಾವಿದ ವಿಜಯ್ ಕುಮಾರ್ ಕೊಡಿಯಾಲ್ ಬೈಲ್ ಅವರು ನನ್ನ ಗುರುಗಳು. ಈ ಸಿನಿಮಾ ತುಂಬಾ ಚೆನ್ನಾಗಿ ಮೂಡಿ ಬಂದಿದ್ದು ತುಳುವರು ಎಲ್ಲರೂ ಸಿನಿಮಾ ನೋಡಿ ನಮ್ಮನ್ನು ಹರಸಿ" ಎಂದರು. ಕೊಡಿಯಾಲ್ ಬೈಲ್ ಮಾತಾಡಿ, "ಲಿಖಿತ್ ಶೆಟ್ಟಿ ನನ್ನ ಆತ್ಮೀಯರು. ಬಹಳ ಕಷ್ಟಪಟ್ಟು ಈ ಸಿನಿಮಾ ಮಾಡಿದ್ದಾರೆ. ಎಲ್ಲರೂ ಹೊಸಬರ ಈ ಪ್ರಯತ್ನಕ್ಕೆ ಸಹಕಾರ ನೀಡಬೇಕು" ಎಂದರು.











KARAVALI THARANGINI Weekly Owned, Editor, Published & Printed by Lalithasri Preetham Rai No.2-64/54(12), Pushparaj Nilaya, Jayanagara, 3rd 'A' Maroli Village, Dakshina Kannada, Karnataka - 575005.
email: karavalitharangini@gmail.com, web: karavalitharangini.com ph: 9880109212 Printed at Bhima Samskruthi Printers & Publishers, No 1182 14th Main Road Prakash Nagar, Bengaluru Karnataka-560021